ಉಪನ್ಯಾಸ
ಗ್ರಂಥಮಾಲೆ

೭೫

ಭಾರತದಲ್ಲಿ ಶೈಕ್ಷಣಿಕ ಪ್ರಯೋಗ

ವ್ಹಿ. ಎಸ್. ಕುಲಕರ್ಣಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಫೆಬ್ರುವರಿ, ೧೯೬೯

ಉಪನ್ಯಾಸ ಗ್ರಂಥಮಾಲೆ

೭೫

ಭಾರತದಲ್ಲಿ ಶೈಕ್ಷಣಿಕ ಪ್ರಯೋಗ

ವ್ಹಿ. ಎಸ್. ಕುಲಕರ್ಣಿ, ಎಂ.ಎ.,ಎಂ.ಈಡಿ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಫೆಬ್ರುವರಿ, ೧೯೭೯

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು,
ಪ್ರಸಾರಾಂಗ-ವಿಸ್ತರಣ-ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩

ಪ್ರಥಮ ಮುದ್ರಣ : ೩,೦೦೦ ಪ್ರತಿಗಳು,
ಅಗಸ್ಟ, ೧೯೬೮
ದ್ವಿತೀಯ ಮುದ್ರಣ: ೫,೦೦೦ ಪ್ರತಿಗಳು,
ಫೆಬ್ರುವರಿ, ೧೯೭೯

ಬೆಲೆ : ೫೦ ಪೈಸೆ

ಮುದ್ರಕರು :

ಜಿ. ಬಿ. ಮನ್ವಾಚಾರ

ಸಹಾಯಕ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ-೫೮೦೦೦೩

ಮುನ್ನುಡಿ

(ಪ್ರಥಮ ಮುದ್ರಣ)

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನ ಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವ ವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವುದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೆ ಎಪ್ಪತ್ನಾಲ್ಕು ಪುಸ್ತಕಗಳು ಪ್ರಕಟವಾಗಿವೆ. ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಎರಡು-ಮೂರು ಮುದ್ರಣಗಳನ್ನೂ ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–೩
೧–೮–೬೮

ಎ. ಎಸ್. ಅಡಕೆ
ಉಪಕುಲಪತಿ

ನಿವೇದನೆ

೧೯೬೭ ನವಂಬರ ೧೮ ಹಾಗು ೧೯ ರಂದು, ಧಾರವಾಡ ಜಿಲ್ಲೆಯ ಕೋಣ್ಣೂರ ಗ್ರಾಮದಲ್ಲಿ ಏರ್ಪಡಿಸಲಾದ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಶಿಬಿರದಲ್ಲಿ, "ಭಾರತದಲ್ಲಿ ಶೈಕ್ಷಣಿಕ ಪ್ರಯೋಗ"ವೆಂಬ ವಿಷಯದ ಮೇಲೆ ಮಾಡಿದ ಭಾಷಣದ ವಿಸ್ತೃತ ವರದಿಯೇ ಈ ಚಿಕ್ಕ ಹೊತ್ತಿಗೆಯಾಗಿದೆ.

ಶಿಕ್ಷಣವು ಈಗ ಪಡೆದಷ್ಟು ಗಮನವನ್ನು ಇಪ್ಪತ್ತು ವರುಷಗಳ ಹಿಂದೆ ಪಡೆದಿದ್ದರೆ ಬಹುಶಃ ಇಂದು ಗೋಚರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳೇ ಹುಟ್ಟಿಕೊಳ್ಳುತ್ತಿದ್ದಿಲ್ಲ. ತಡವಾದರೂ ಚಿಂತೆಯಿಲ್ಲ, ಡಾ॥ ಕೊಠಾರಿ ಅವರ ಹಿರಿಯತನದಲ್ಲಿ, ರಾಷ್ಟ್ರೀಯ ಶಿಕ್ಷಣ ಆಯೋಗವನ್ನು ನೇಮಿಸಿ ನಮ್ಮ ಸರಕಾರವು ಶೈಕ್ಷಣಿಕ ದಿಶೆಯಲ್ಲಿ ಒಂದು ನಿರ್ಧಾರದ ಹೆಜ್ಜೆಯನ್ನಿಟ್ಟಿದೆ. ಅದು ತನ್ನ ಬೃಹತ್ ವರದಿಯಲ್ಲಿ ವಿಶದಪಡಿಸಿದ ಶಿಕ್ಷಣ ಕ್ರಮವು ವಿಚಾರಾರ್ಹವಾಗಿದೆ. ಇದುವರೆಗೂ ಮುಂದೂಡಲ್ಪಡುತ್ತ ಬಂದ ರಾಷ್ಟ್ರೀಯ ಶಿಕ್ಷಣವು ಈಗ ಮೂರ್ತಗೊಳ್ಳುವ ಸಮಯ ಪ್ರಾಪ್ತವಾಗಿದೆ.

ಈ ಸಂಧಿಕಾಲದಲ್ಲಿ ಇದುವರೆಗೂ ಪ್ರಚಲಿತವಿದ್ದ ಬ್ರಿಟಿಷ್–ಪ್ರಣೀತ ಶಿಕ್ಷಣ ಪದ್ಧತಿಯ ಕನಿಷ್ಠ ಸ್ಥೂಲಪರಿಚಯವಿರುವದು ಅವಶ್ಯಕವಾಗಿದೆ. ತಮ್ಮ ರಾಜಕೀಯ ಗುರಿಯನ್ನು ಸಾಧಿಸಲು ಬ್ರಿಟಿಷರು ಪ್ರಯೋಗಿಸಿದ ಶಿಕ್ಷಣ ಕ್ರಮವು ನಮ್ಮ ಕಣ್ಣುಗಳನ್ನು ತೆರೆಯಿಸದೆ ಇರದು. ಈಗ ಅವಾಸ್ತವ ಮಹತ್ವ ಪಡೆದ ಹಲವಾರು ಸಮಸ್ಯೆಗಳು, ರಾಷ್ಟ್ರೀಯ ಶಿಕ್ಷಣದ ಅಭಾವ

ದಿಂದ ಹುಟ್ಟಿಕೊಂಡಿವೆ ಎಂಬುದು ಈ ಇಪ್ಪತ್ತು ವರುಷಗಳ ಇತಿಹಾಸದಿಂದ ಗೊತ್ತಾಗುವ ಸಂಗತಿಯಾಗಿದೆ.

ಈ ಚಿಕ್ಕ ಹೊತ್ತಿಗೆಯಲ್ಲಿ ಮುಖ್ಯವಾಗಿ ಬ್ರಿಟಿಷ್ ಶಿಕ್ಷಣದ ಮೂಲಭೂತ ಧೋರಣೆಗಳನ್ನು ವಿಶ್ಲೇಷಿಸಲಾಗಿದೆ. ಹಾಗೆಯೇ ಗಾಂಧೀಜಿಯವರ ಮೂಲ ಶಿಕ್ಷಣ, ರವೀಂದ್ರರ ವಿಶ್ವಭಾರತಿ ಹಾಗು ಸ್ವತಂತ್ರ ಭಾರತದಲ್ಲಿ ಮುಂದುವರಿಸಲಾದ ಶೈಕ್ಷಣಿಕ-ಕ್ರಮವನ್ನು ಪರೀಕ್ಷಿಸಲಾಗಿದೆ. ಕೊಠಾರಿ ಆಯೋಗವು ಒಪ್ಪಿಸಿದ ವರದಿಯನ್ವಯ ರೂಪಿತವಾಗಬಹುದಾದ ರಾಷ್ಟ್ರೀಯ ಶಿಕ್ಷಣದ ರೂಪ-ರೇಷೆಗಳನ್ನು ವಿವರಿಸಲಾಗಿದೆ. ಮುಖ್ಯವಾಗಿ ಸ್ವತಂತ್ರ ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣವು ಭಾರತೀಯ ಜೀವನವನ್ನಾಧರಿಸಿ ಮೂಡಿಬರಬೇಕೆಂಬ ಆಶಯವನ್ನು ವ್ಯಕ್ತಪಡಿಸಲಾಗಿದೆ.

ಈ ಕಿರುಹೊತ್ತಿಗೆಯನ್ನು ಪ್ರಕಟಿಸಲು ಮುಂದಾದ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳಿಗೂ, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಯ ನಿರ್ದೇಶಕರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಈ ಗ್ರಂಥ ರಚನೆಗೆ ಬೇಕಾದ ಅನೇಕ ಶೈಕ್ಷಣಿಕ ವರದಿಗಳನ್ನು ದೊರಕಿಸಿಕೊಟ್ಟು, ಹಲವಾರು ಸೂಕ್ತ ಸಲಹೆಗಳನ್ನಿತ್ತ ಪ್ರೊ. ಅಪ್ಪಾಸಾಹೇಬ ಸನದಿ ಅವರಿಗೆ ನನ್ನ ಅಭಿನಂದನೆಗಳು ಸಲ್ಲಬೇಕು.

ಸಿ. ಎಸ್. ಬೆಂಬಳಗಿ ಆರ್ಟ್ಸ ಕಾಲೇಜ,
ರಾಮದುರ್ಗ
೧-೫-೬೮

ವ್ಹಿ. ಎಸ್. ಕುಲಕರ್ಣಿ

ಪರಿವಿಡಿ

೧. ಶೈಕ್ಷಣಿಕ ಪ್ರಯೋಗವೆಂದರೇನು ?

ವ್ಯಾಪಾರವನ್ನೇ ತಮ್ಮ ಗುರಿಯನ್ನಾಗಿಟ್ಟುಕೊಂಡು ಆಗಮಿಸಿದ ಬ್ರಿಟಿಷರು. ಭಾರತದ ರಾಜಕೀಯದಲ್ಲಿ ಧುಮುಕಿ, ಸಮಸ್ತ ಭಾರತವನ್ನು ಸ್ವಾಧೀನಪಡಿಸಿಕೊಂಡು ಸಾವಿರಾರು ಮೈಲು ದೂರ ಬಂದು ಭಾರತದಂಥ ವಿಶಾಲ ದೇಶವನ್ನು ಆಳಲು ಚಾಣಾಕ್ಷತೆ ಬೇಕಾಗಿತ್ತು: ಸಮಸ್ತ ಭಾರತೀಯರನ್ನು ವಿನಮ್ರ ನಾಗರಿಕರನ್ನಾಗಿ ಮಾಡಬೇಕಾಗಿತ್ತು. ಮೆಕಾಲೆ ಸಾಹೇಬರು ಭಾರತವನ್ನು ಶಾಶ್ವತವಾಗಿ ಅಂಕಿತದಲ್ಲಿಟ್ಟುಕೊಳ್ಳುವ ವಿಧಾನ ವನ್ನು ಹೇಳಿಕೊಟ್ಟರು. ಭಾರತೀಯರನ್ನು ಅವರ ಜೀವನದಿಂದ ಪರಾವರ್ತಗೊಳಿಸಿ ಕರಿ ಸಾಹೇಬರನ್ನಾಗಿ ಪರಿವರ್ತಿಸುವ ಶಿಕ್ಷಣ ಕ್ರಮವೇ ಆ ವಿಧಾನವಾಗಿತ್ತು. ೧೮೩೫ರಲ್ಲಿ ರೂಪಗೊಂಡ ಮೆಕಾಲೆ-ಪ್ರಣೀತ ಶಿಕ್ಷಣ ಪದ್ಧತಿಯಂತೆ ಭಾರತದಲ್ಲೆಲ್ಲ ಶಾಲೆ ಕಾಲೇಜುಗಳು ಹುಟ್ಟಿಕೊಂಡವು. ಇಂಗ್ಲೀಷ ಶಿಕ್ಷಣವು ಮುಂದಾಗಿ ಭಾರತೀಯ ಶಿಕ್ಷಣವು ಹಿಂದಾಯಿತು. ಇಂಗ್ಲೆಂಡು ಭಾರತೀಯರ ಸ್ಫೂರ್ತಿಕೇಂದ್ರವಾಯಿತು; ಆದರ್ಶಗಳ ಬೀಡಾಯಿತು. ಇಂಗ್ಲೆಂಡಿನಿಂದ ಬಂದದ್ದೆಲ್ಲ ವರಪ್ರಸಾದವಾಯಿತು.

ಇಂಗ್ಲೀಷ ಭಾಷೆ ಹುಲಿಯ ಹಾಲೆಂದು ನಮ್ಮವರೇ ಹೊಗಳಿ ಹಾಡುವಂತಾಯಿತು. ಸಾಂಪ್ರದಾಯಿಕ ಜೀವನಕ್ಕೆ ಕಟ್ಟು ಬಿದ್ದ ಭಾರತೀಯರಿಗೆ ಇಂಗ್ಲೀಷ ಜೀವನವು ಒಳ್ಳೇ ಆಕರ್ಷಕವಾಗಿ ಕಂಡಿತು. ಇಂಗ್ಲೀಷ ಸಾಹಿತ್ಯ ಇಂಗ್ಲೀಷ ರಾಜನೀತಿ ಭಾರತೀಯರನ್ನು ಮುಗ್ಧಗೊಳಿಸಿದವು. ರಾಜಾ ರಾಮಮೋಹನ ರಾಯರಂಥ ಭಾರತೀಯರೂ ಇಂಗ್ಲೀಷ ಸಂಸ್ಕೃತಿಯ ಪ್ರಚಾರ ಗೈದರು. ಇಂಗ್ಲೀಷ ಕಲಿತ ತರುಣರು ಬ್ರಿಟಿಷ ರಾಜಾಶ್ರಯದಲ್ಲಿ ಹಾಯಾಗಿ ಜೀವನ ನಡೆಯಿಸುವದು ಆಕರ್ಷಕವೆನ್ನಿಸಿತು. ಮೆಕಾಲೆ ಸಾಹೇಬರು ಕಂಡ ಕನಸು ನನಸಾಗಿ, ಭಾರತವು ಬ್ರಿಟಿಷ ಶಿಕ್ಷಣದಿಂದ ಸುಂದಾಗಿ, ತನ್ನತನದ ಪ್ರಜ್ಞೆಯನ್ನೇ ಕಳೆದು ಕೊಂಡಿತು. ಬ್ರಿಟಿಷರು ಕೈಕೊಂಡ ಈ ಶೈಕ್ಷಣಿಕ ಪ್ರಯೋಗವು. ಅವರ ದೃಷ್ಟಿಯಲ್ಲಿ ಅತ್ಯಂತ ಯಶಸ್ವಿಯಾಯಿತು.

ಆದರೆ ೧೯೪೭ರಲ್ಲಿ ಭಾರತವು ಸ್ವತಂತ್ರವಾಗಿ ನೂರಾರು ವರುಷಗಳಿಂದ ಕಡಿದು ಹೋಗಿದ್ದ ತನ್ನ ಭವ್ಯ ಪರಂಪರೆಯನ್ನು ಗುರುತಿಸುವ ಮಹಾಯೋಗವನ್ನು ಪಡೆಯಿತು. ಆದರೆ ಆ ಕಾರ್ಯ ಅಷ್ಟು ಸುಲಭವಾಗಿರಲಿಲ್ಲ. ಕಳೆದ ನೂರೈವತ್ತು ವರುಷಗಳಿಂದಲೂ ಇಂಗ್ಲೀಷ ಶಿಕ್ಷಣದ ಪರಿಣಾಮವಾಗಿ ಪಾಶ್ಚಿಮಾತ್ಯ ದೃಷ್ಟಿಕೋನವನ್ನು ಬೆಳೆಯಿಸಿಕೊಂಡು ಬಂದ ಭಾರತೀಯರಿಗೆ, ಎಲ್ಲವನ್ನೂ ಬ್ರಿಟಿಷ್ ದೃಷ್ಟಿಕೋನದಿಂದ ನೋಡುವ ಚಟ ರಕ್ತಗತವಾಗಿತ್ತು. ಹೊಸ ರಾಷ್ಟ್ರೀಯ ದೃಷ್ಟಿ ಸ್ಪಷ್ಟವಾಗಿ ಮೂಡಿದ್ದಿಲ್ಲ. ಸ್ವಾತಂತ್ರ್ಯನಂತರ ಹುಟ್ಟಿಕೊಂಡ ಎಷ್ಟೋ ರಾಜಕೀಯ, ಸಾಮಾಜಿಕ, ಆರ್ಥಿಕ ಮುಗ್ಗಟ್ಟುಗಳಿಂದ

ತೊಂದರೆಗೀಡಾದ ಭಾರತ ಸರಕಾರಕ್ಕೆ ಶಾಶ್ವತವಾದ ರಾಷ್ಟ್ರೀಯ ಶೈಕ್ಷಣಿಕ ನೀತಿಯನ್ನು ಅನುಸರಿಸುವದಾಗಲಿಲ್ಲ. ಈ ಮಧ್ಯೆ ಸ್ವೀಕರಿಸಲಾದ ರಾಜ್ಯಘಟನೆಯ ನಿರ್ದೇಶಕ ತತ್ವದಂತೆ ಪ್ರಾಥಮಿಕ ಶಿಕ್ಷಣವು ಮಾತ್ರ ಸಾರ್ವತ್ರಿಕವಾಯಿತು.

ಆದರೂ ಶಿಕ್ಷಣವನ್ನು ಪುನರ್ರಚಿಸುವ ಪ್ರಯತ್ನ ನಡೆದೇ ಇತ್ತು. ಆಯೋಗಗಳ ಮೇಲೆ ಆಯೋಗಗಳು ರಚಿತವಾದವು. ಒಂದರ ಹಿಂದೊಂದು ವರದಿಗಳು ಹೊರಬಿದ್ದವು. ಆದರೆ ಸಮಗ್ರ ಶೈಕ್ಷಣಿಕ ನೀತಿಯ ಅಭಾವದಿಂದಾಗಿ ಅವಾವವೂ ಭಾರತವ ಶೈಕ್ಷಣಿಕ ನೀತಿಯನ್ನು ದೃಢವಾಗಿ ಪ್ರಸ್ಥಾಪಿಸಲು ಯಶಸ್ವಿಯಾಗಲಿಲ್ಲ. ಒಂದೊಂದು ವೈಚಾರಿಕ ದೃಷ್ಟಿಯಿಂದ ಹೊರಬಿದ್ದ ಈ ವರದಿಗಳು ಸಮಗ್ರ ಶೈಕ್ಷಣಿಕ ಪ್ರಯೋಗ ಕ್ಕೊಳಗಾಗದೆ, ಮಂತ್ರ ಮಂತವಾಗಿ ರೂಪಿಸಿದ ಯೋಜನೆಗಳಾದ್ದ ರಿಂದ ಆಗಬೇಕಾದಷ್ಟು ಪ್ರಗತಿಯನ್ನು ಸಾಧಿಸಲಿಲ್ಲ.

ಬ್ರಿಟಿಷ ಶಿಕ್ಷಣ ನೀತಿಯಿಂದ ನೊಂದುಕೊಂಡು ಭಾರತಕ್ಕೆ ತನ್ನದೇ ಆದ ರಾಷ್ಟ್ರೀಯ ಶಿಕ್ಷಣ ಪದ್ಧತಿಯಿರಬೇಕೆಂಬ ಕಳಕಳಿ ಯಿಂದ ಮುಂದಾದ ಗಾಂಧೀಜಿಯವರ ವರ್ಧಾ ಶಿಕ್ಷಣ. ರವೀಂದ್ರನಾಥ ಟಾಗೋರರ ವಿಶ್ವಭಾರತಿ, ಭಾರತೀಯ ಶಿಕ್ಷಣ ರಂಗದಲ್ಲಿ ನಡೆದ ಶುದ್ಧ ಭಾರತೀಯ ಶೈಕ್ಷಣಿಕ ಪ್ರಯೋಗ ಗಳಾಗಿವೆ. ಆದರೆ ವೈಯಕ್ತಿಕವಾಗಿ ಪ್ರಾರಂಭವಾದ ಅವರ ಪ್ರಯೋಗಗಳು, ಪಡೆಯಬೇಕಾದಷ್ಟು ಪ್ರಚಾರವನ್ನಾಗಲೀ, ಜನಬೆಂಬಲವನ್ನಾಗಲೀ, ಸರಕಾರಿ ಆಶ್ರಯವನ್ನಾಗಲೀ ಪಡೆಯ

ಲಿಲ್ಲ. ಮೊದಲೇ ಸಮಗ್ರ ನೀತಿಯನ್ನು ಅನುಸರಿಸದ ಬ್ರಿಟಿಷ್ ಹಾಗು ಭಾರತ ಸರಕಾರಗಳು ಇವುಗಳನ್ನು ಅಲಕ್ಷ್ಯತನದಿಂದಲೇ ಕಂಡವು.

ಭಾರತಕ್ಕೆ ಅಖಿಲಭಾರತ ಶೈಕ್ಷಣಿಕ ನೀತಿಯಿಲ್ಲದುದು ಕೊರತೆ ಇದ್ದೇ ಇತ್ತು. ಕೊನೆಗೊಮ್ಮೆ ಭಾರತ ಸರಕಾರಕ್ಕೆ ತನ್ನ ಶೈಕ್ಷಣಿಕ ನೀತಿಯ ಶಿಥಿಲತೆಯ ಅರಿವಾಗಿ ೧೯೬೪ರಲ್ಲಿ ಒಂದು ರಾಷ್ಟ್ರೀಯ ಶಿಕ್ಷಣ ಆಯೋಗವನ್ನು ನೇಮಿಸಿತು. ದೇಶವಿದೇಶಗಳ ತಜ್ಞರಿಂದೊಡಗೂಡಿದ ಈ ಆಯೋಗವು ತನ್ನ ಬೃಹತ್ ವರದಿಯಲ್ಲಿ ಸಮಗ್ರ ಶಿಕ್ಷಣವನ್ನು ಪರಿಶೀಲಿಸಿ, ಕ್ರಾಂತಿಕಾರೀ ಬದಲಾವಣೆಗಳನ್ನು ಸೂಚಿಸಿದೆ. ರಾಷ್ಟ್ರೀಯ ಭಾವೈಕ್ಯ ಮೊದಲ್ಗೊಂಡು ಅಂತರರಾಷ್ಟ್ರೀಯ ತಿಳಿವಳಿಕೆಯವರೆಗೂ ತನ್ನ ವ್ಯಾಪ್ತಿಯನ್ನು ಇಟ್ಟುಕೊಂಡಿದೆ. ಭಾರತದ ರಾಜಕೀಯ ನೀತಿಗೆ ಪೋಷಕವಾಗಬಲ್ಲ ವ್ಯಾವಹಾರಿಕ ಶೈಕ್ಷಣಿಕ ನೀತಿಯನ್ನು ಸಮರ್ಥಿಸಿದೆ.

ಭಾರತ ಸರಕಾರವು ಈ ಮೊದಲು ತಳೆದ ಶೈಕ್ಷಣಿಕ ಧೋರಣೆಯ ಪರಿಣಾಮವಾಗಿ, ಹಲವಾರು ಭಾಷಾಸಮಸ್ಯೆಗಳು ತಲೆದೋರಿ, ಬುದ್ಧಿವಂತರೂ ತಮ್ಮ ಬೌದ್ಧಿಕ ಸಮತೋಲನೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಹಿಂದೀ ಇಂಗ್ಲೀಷ ಮಾತೃಭಾಷೆಗಳ ಸ್ಥಾನಮಾನದಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ ಸಮಗ್ರ ಭಾರತವು, ಇದುವರೆಗೂ ಕಂಡರಿಯದ ಶೈಕ್ಷಣಿಕ ಅಸ್ಥಿರತೆಯನ್ನು ಅನುಭವಿಸುತ್ತಿದೆ. ಒಂದೊಂದು ಪ್ರಾಂತ

ಒಂದೊಂದು ಅಭಿಪ್ರಾಯವುಳ್ಳದ್ದಾಗಿದೆ. ಹತ್ತು ವರುಷಗಳ ಹಿಂದೆ ಕಂಡು ಬಂದ ಹಿಂದಿಗಿರುವ ಗೌರವಾದರಗಳು, ಇಂದು ರಾಜಕೀಯ ಸುಂಟರಗಾಳಿಗೆ ಸಿಕ್ಕು ಇಲ್ಲದಂತಾಗಿದೆ. ಸ್ವ-ತಂತ್ರಕ್ಕಾಗಿ ಪ್ರಾಪ್ತ ಮಾಡಿಕೊಂಡ ಸ್ವಾತಂತ್ರ್ಯವು ಪರಕೀಯ ಭಾಷಾ ವ್ಯಾಮೋಹದಿಂದ ಇನ್ನೂ ಮುಕ್ತಿ ಹೊಂದಿಲ್ಲ. ಮೆಕಾಲೆ ಸಾಹೇಬರ ತಂತ್ರ—ಇಂಗ್ಲೀಷ ಭಾಷೆ ಹಾಗು ಇಂಗ್ಲೀಷ ಜೀವನದ ಅನುಕರಣೆ—ಇನ್ನೂ ಪ್ರಬಲವಾಗಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ಧಾರದ ನಿರ್ಣಯ ತೆಗೆದುಕೊಳ್ಳಲು ಬೇಕಾದ ಬೌದ್ಧಿಕ ಪ್ರಾಮಾಣಿಕತೆಯೂ ಇಲ್ಲದಾಗಿದೆ. ಅಂತರರಾಷ್ಟ್ರೀಯ ಅತ್ಯಂತಿಕ ಉತ್ಸಾಹದಲ್ಲಿ ರಾಷ್ಟ್ರೀಯತೆಯು ಅಲ್ಪತನದ್ದಾಗಿ ಕಾಣುತ್ತಿದೆ. ಹಾಗೆಯೇ ರಾಷ್ಟ್ರೀಯತೆಯ ಅತಿರೇಕದಲ್ಲಿ ಅಂತರರಾಷ್ಟ್ರೀಯತೆಯು ದುರ್ಲಕ್ಷ್ಯವೂ ಪದ್ದು ಕಾಣುತ್ತಿದೆ. ಹಾಗೆಯೇ ಪ್ರಾಂತೀಯತೆಯ ಹುಚ್ಚುಹೊಳೆಯಲ್ಲಿ ರಾಷ್ಟ್ರೀಯ ಸಮಗ್ರತೆಯು ಕೊಚ್ಚಿಹೋಗುತ್ತಿದೆ. ಭಾರತೀಯ ಭಾಷೆಗಳ ಬಳಕೆಯಿಂದ ಅಖಂಡ ಭಾರತವು ಖಂಡವಾದೀತೆಂಬ ಭೀತಿ ಒಂದೆಡೆಗಿದ್ದರೆ, ಭಾರತದ ನಾಗರಿಕನ ಸರ್ವಾಂಗೀಣ ಉನ್ನತಿಯು ಅವನ ಮಾತೃಭಾಷೆಯಿಂದಲೇ ಆಗಬಲ್ಲುದೆಂಬ ವಿಶ್ವಾಸವೂ ಹುಟ್ಟಿಕೊಂಡಿದೆ. ಹೀಗೆ ಒಂದರ ಹಿಂದೊಂದು ಸಮಸ್ಯೆಗಳು ಉದ್ಭವಿಸಿ ಸಮಗ್ರ ಭಾರತಕ್ಕೆ ಬೇಕಾದ ರಾಷ್ಟ್ರೀಯ ಯೋಜನೆಗಳನ್ನು ಮುಂದೂಡುತ್ತಿವೆ.

ಈ ಸಂಧಿಕಾಲದಲ್ಲಿ ಇದುವರೆಗೂ ನಡೆದ ಬ್ರಿಟಿಷ ಹಾಗು ಭಾರತೀಯ ಶೈಕ್ಷಣಿಕ ಪ್ರಯೋಗಗಳನ್ನು ಅವಲೋಕಿಸುವದು

ಮತ್ತು ಅವುಗಳಲ್ಲಿಯ ದೋಷಗಳನ್ನು ಕಂಡುಕೊಳ್ಳುವದು ಮತ್ತು ಅವುಗಳ ಹಿನ್ನಲೆಯಲ್ಲಿ ಹೊಸ ಪ್ರಯೋಗಗಳನ್ನು ಕೈಕೊಳ್ಳುವದು ಫಲಪ್ರದವಾಗದೇ ಇರದು. ವಿಶೇಷವಾಗಿ ಬ್ರಿಟಿಷ್–ಶಿಕ್ಷಣ ನೀತಿಯ ಹಿನ್ನೆಲೆ, ಅವರು ಕೈಕೊಂಡ ವಿವಿಧ ಶೈಕ್ಷಣಿಕ ಪ್ರಯೋಗಗಳು. ಅವುಗಳಿಂದುಂಟಾದ ಭೀಕರ ಪರಿಣಾಮ ಮತ್ತು ಆ ಪರಿಣಾಮಗಳು ಇನ್ನೂ ನಮ್ಮನ್ನು ಹೇಗೆ ಸುತ್ತುವರಿದಿವೆ. ಅವುಗಳಿಂದ ಬಿಡುಗಡೆ ಹೊಂದುವ ಬಗೆ ಇವೇ ಮುಂತಾದ ಸಂಗತಿಗಳನ್ನು ತಿಳಿದುಕೊಳ್ಳಬೇಕು. ಹಾಗೆಯೇ ನಮ್ಮ ಪ್ರಜಾಪ್ರಭುತ್ವ. ಧರ್ಮಾತೀತ ರಾಜ್ಯದ ಕಲ್ಪನೆ. ಸಮಾಜವಾದೀ ಸಮಾಜ ರಚನೆ. ರಾಷ್ಟ್ರೀಯ ಭಾವೈಕ್ಯ. ರಾಷ್ಟ್ರೀಯ ಅಭಿವೃದ್ಧಿ ಯೋಜನೆ. ಅಂತರರಾಷ್ಟ್ರೀಯ ತಿಳುವಳಿಕೆ ಇತ್ಯಾದಿ ವಿಷಯಗಳೂ ನಮಗೆ ವಿದಿತವಾಗಬೇಕು. ಮತ್ತು ಈ ವಿಚಾರಗಳ ಹಿನ್ನೆಲೆಯಲ್ಲಿ ನಾವು ನಮ್ಮ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಲ್ಲ ಮನೋಬಲವನ್ನು ಪ್ರಾಪ್ತ ಮಾಡಿಕೊಳ್ಳಬೇಕು.

---

೨. ಬ್ರಿಟಿಷ್ ಶಿಕ್ಷಣ

ಜೀವನ ನಿರ್ವಹಣೆಗಾಗಿ ಮಕ್ಕಳನ್ನು ಸಿದ್ಧಗೊಳಿಸುವದೇ ಶಿಕ್ಷಣವೆಂದು ಕೆಲವರು ಹೇಳುತ್ತಾರೆ. ಆದರೆ ನಿಜವಾಗಿ ವ್ಯಕ್ತಿಯಲ್ಲಿ ಹುದುಗಿದ ಕ್ರಿಯಾತ್ಮಕ ಶಕ್ತಿಗಳನ್ನು ಬಡಿದೆಬ್ಬಿಸಿ ಅವುಗಳಿಗೆ ಯೋಗ್ಯ ಸ್ಥಳಾವಕಾಶಗಳನ್ನು ಕಲ್ಪಿಸುವದು. ಅವನಿಗೆ ತನ್ನ ಪರಿಸರದ ಪರಿಚಯ ಮಾಡಿಕೊಡುವದು; ಅವನ ಕುಟುಂಬ. ಸಮಾಜ. ರಾಷ್ಟ್ರಗಳಲ್ಲಿ ಅವನ ಪಾತ್ರವನ್ನು ಸ್ಪಷ್ಟಗೊಳಿಸುವದು. ತನ್ನ ಸಮಾಜದಿಂದ ಬಳುವಳಿಯಾಗಿ ಬಂದ ಭಾಷೆ. ಸಂಸ್ಕೃತಿ, ಸಭ್ಯತೆಯನ್ನು ತಿಳಿಸಿಕೊಡುವುದು; ಸಾಮೂಹಿಕ ಜೀವನ ನಡೆಯಿಸಲು ಬೇಕಾದ ಸಂಯಮ, ಶಿಸ್ತು, ಸದಾಚಾರ, ಸದ್ವರ್ತನೆಗಳನ್ನು ಅವನಲ್ಲಿ ಬೇರೂರಿಸುವದು; ನಾಡಿಗಾಗಿ ದುಡಿಯುವ ಹಂಬಲ. ನಾಡ ರಕ್ಷಣೆಗಾಗಿ ಹೋರಾಡುವ ಛಲ ಮುಂತಾದ ಉದಾತ್ತ ಗುಣಗಳನ್ನು ಬೇರೂರಿಸುವದು; ತಾನೂ ಬದುಕಿ ಜನ ಬದುಕಬೇಕೆಂಬ ಸ್ವಾರ್ಥ ಪದಾರ್ಥಗಳ ಇತಿಮಿತಿಯನ್ನು ಅರುಹುವದು; ಕ್ರಿಯಾತ್ಮಕ ಚಟುವಟಿಕೆಗಳ ಮುಖಾಂತರ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವದು; ಮಾನವನನ್ನು ಮಾನವನನ್ನಾಗಿ ಕಾಣಲು ಹಸನಾದ ದೃಷ್ಟಿ

ಯನ್ನು ತಂದು ಕೊಡುವದು ಆಧುನಿಕ ಶಿಕ್ಷಣದ ಗುರಿಗಳಾಗಿವೆ. ಜೀವನದ ವಿಸ್ತಾರ ಹೆಚ್ಚಿದಂತೆ ಶಿಕ್ಷಣದ ವ್ಯಾಪ್ತಿಯೂ ಹೆಚ್ಚುತ್ತ ಸಾಗಿದೆ.

ವಿಶೇಷ ಪರಿಶ್ರಮವಿಲ್ಲದೆ, ಭಾರತೀಯರ ಅನೈಕ್ಯತೆಯನ್ನೇ ತಮ್ಮ ಅನುಕೂಲಕ್ಕಾಗಿ ಬಳಸಿ, ಭಾರತವನ್ನು ಗೆದ್ದ ಬ್ರಿಟಿಷರು, ಭಾರತೀಯರನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಇನ್ನೂ ಜಯಿಸಬೇಕಾಗಿತ್ತು. ಅದಕ್ಕಾಗಿ ಶಿಕ್ಷಣವನ್ನು ತಮ್ಮ ಇಚ್ಛಿತ ಪರಿವರ್ತನೆಗೆ ಉಪಯೋಗಿಸಿದರು. ಬ್ರಿಟಿಷ್ ಶಿಕ್ಷಣವು ಸೃಜನಾತ್ಮಕ ಕ್ರಿಯೆಗಳನ್ನೆಲ್ಲ ಅಲ್ಲಗಳೆದು ಭಾರತೀಯರನ್ನು ನಿಷ್ಕ್ರಿಯರನಾಗಿ ಮಾಡುವ ಉದ್ದೇಶವಿಟ್ಟುಕೊಂಡಿತು. ಸದಾ ಕಾಲವೂ ಭಾರತವು ಬ್ರಿಟಿಷ್ ಸಾಮ್ರಾಜ್ಯದ ತೊತ್ತಾಗಿರಬೇಕೆಂಬ ಅವರ ಸಂಕಲ್ಪವು ಸುಲಭವಾಗಿ ಈಡೇರಬೇಕಾಗಿತ್ತು. ಆಧುನಿಕ ಶಿಕ್ಷಣದ ಗೊತ್ತುಗುರಿಗಳ ಹಿನ್ನೆಲೆಯಲ್ಲಿ ವಿವೇಚಿಸಿದರೆ ಬ್ರಿಟಿಷ್ ಶಿಕ್ಷಣವು ನಿಸ್ಸಂಶಯವಾಗಿ ನಿಷೇಧಾತ್ಮಕ ಶಿಕ್ಷಣವಾಗಿತ್ತು.

ರಾಜದಂಡವು ಶಕ್ತಿಶಾಲಿಯಾದಂತೆ ಶಿಕ್ಷಣವು ಅದರ ಅಡಿಯಾಳಾಗಿ ವರ್ತಿಸಿದ್ದು ಜಾಗತಿಕ ಸತ್ಯವಾಗಿದೆ. ಅದನ್ನು ಮಾನವನನ್ನು ಅತಿಮಾನವನನ್ನಾಗಿ ಪರಿವರ್ತಿಸಲೂ ಉಪಯೋಗಿಸಬಹುದು. ಇಲ್ಲವೆ ಅದಿಮಾನವನನ್ನಾಗಿ ಹೊಟಕುಗೊಳಿಸಲೂ ಬಳಸಬಹುದು: ಸೇಡಿನ ಕಿಡಿಯನ್ನು ಜ್ವಲಂತಗೊಳಿಸಿ ವೈರಿಯನ್ನು ಸದೆಬಡಿಯಲೂ ಅಣಿಗೊಳಿಸಬಹುದು. ಇಲ್ಲವೆ ಮಾನವತೆಗೆ ಅಂಟಿಕೊಂಡ ಮಹಾಮಾಲ್ಯವನ್ನು ಹೊಡೆ

ದೋಡಿಸುವ ದಿವ್ಯೌಷಧವೆಂದೂ ಉಪಯೋಗಿಸಬಹುದು. ಶಿಕ್ಷಣದ ಗೊತ್ತುಗುರಿಗಳನ್ನಿಟ್ಟುಕೊಂಡಂತೆ ಶೈಕ್ಷಣಿಕ ಪರಿಣಾಮ ಗಳು ಕಂಡುಬರುತ್ತವೆ. ಮೊದಲನೆಯ ಮಹಾ ಯುದ್ಧದಲ್ಲಿ ಅನುಭವಿಸಿದ ಸೋಲಿನಿಂದ ನೆಲಹಿಡಿದ ಜರ್ಮನ್ನರನ್ನು ಬಡಿದೆಬ್ಬಿಸಿ, ಅಲೆಕ್ಸಾಂಡರನಂತೆ ವಿಶ್ವವನ್ನೇ ಗೆಲ್ಲಲು ಹಿಟ್ಲರನು ಜರ್ಮನ್ ಜನತೆಯನ್ನು ಅಣಿಗೊಳಿಸಿದನು. ಕೇವಲ ಇಪ್ಪತ್ತು ವರುಷಗಳಲ್ಲಿ ಕೈಲಾಗದವರನ್ನು ಜಾಗತಿಕ ಕಡುಗಲಿಗಳನ್ನಾಗಿ ಮಾಡಿದ ಶ್ರೇಯಸ್ಸು ಹಿಟ್ಲರನಿಗೆ ಸಲ್ಲುತ್ತದೆ. ಪರದಾಸ್ಯ ಶೃಂಖಲೆಯಿಂದ ಬಿಡುಗಡೆ ಮಾಡ ಹೊರಟ ಹಿಟ್ಲರನು ಜರ್ಮನ್ ಗಣಿತ, ಜರ್ಮನ್ ಜೀವಶಾಸ್ತ್ರ, ಜರ್ಮನ್ ಭೌತ ಶಾಸ್ತ್ರಗಳನ್ನೇ ನಿರ್ಮಿಸ ಹೊರಟ. ಅವನ ಧ್ಯೇಯ ಸ್ಪಷ್ಟವಿತ್ತು; ಮುಟ್ಟುವ ಗುರಿ ಕಣ್ಮುಂದಿತ್ತು. ಜೀವಂತ ಹೆಣಗಳಂಥ ಜರ್ಮನರನ್ನು ಜ್ವಲಂತ ಅಭಿಮಾನಧನರನ್ನಾಗಿ ಮಾರ್ಪಡಿಸಿದ್ದು ಸಾಮಾನ್ಯ ಕೆಲಸವಲ್ಲ. ಉದ್ದೇಶಪೂರಿತ ಗುರಿಯನ್ನು ಶೈಕ್ಷಣಿಕ ಪ್ರಚೋದನೆಯಿಂದ ಸಹಜವಾಗಿ ಸಾಧಿಸಬಹುದೆಂಬ ಶೈಕ್ಷಣಿಕ ಹಿಟ್ಲರನು ಮನಗಾಣಿಸಿಕೊಟ್ಟ.

ರೋಮ್ ಸಾಮ್ರಾಜ್ಯವನ್ನು ಸ್ಥಾಪಿಸಿ ಜಗತ್ತಿನಲ್ಲಿ ಅಜೇಯ ಜನಾಂಗವಾಗಿ ಬಾಳಿದ ಇಟಾಲಿಯನ್ನರನ್ನು ಮತ್ತೊಮ್ಮೆ ಎದ್ದು ನಿಲ್ಲುವಂತೆ ಮಾಡಿದ ಶ್ರೇಯಸ್ಸು ಮುಸಲೋನಿಗೆ ಸಲ್ಲ ಬೇಕು. ಆರ್ಥಿಕವಾಗಿ ದಿವಾಳಿ ತೆಗೆದ ಇಟಲಿಯನ್ನು ಕೇವಲ ಹದಿನೈದು ವರುಷಗಳಲ್ಲಿ, ಆಧುನಿಕ ರಾಷ್ಟ್ರಗಳ ಮಾಲಿಕೆಯಲ್ಲಿ ತಂದು ನಿಲ್ಲಿಸಿದ್ದು ಸಾಮಾನ್ಯ ಕೆಲಸವೇನಲ್ಲ. ಜನಾಂಗದ ನರ

ಮಂಡಲದಲ್ಲಿ ಬಿಸಿರಕ್ತ ಹರಿಯುತ್ತಿರಬೇಕಾದರೆ ಶಿಕ್ಷಣವನ್ನು ಸದಾಕಾಲ ಅಣಿಗೊಳಿಸಿಕೊಳ್ಳಬೇಕು. ಇದಕ್ಕೂ ಮೊದಲು ಹರಿದು ಹಂಚಿ ಹೋದ ಇಟಲಿಯನ್ನು ಒಗ್ಗೂಡಿಸಿದ ಶ್ರೇಯಸ್ಸು ಮ್ಯಾಝಿನಿ ಗ್ಯಾರಿಬಾಲ್ಡಿಯವರಿಗೆ ಸಲ್ಲುತ್ತದೆ. ಅವರಿಗೆ ರಾಜ್ಯಾಧಿಪತ್ಯವನ್ನು ನಿರ್ವಹಿಸಿ ಇಟಾಲಿಯನ್ನರಿಗೆ ಶಿಕ್ಷಣ ಕೊಡುವದಾಗದಿದ್ದರೂ, ಲೋಕಶಿಕ್ಷಣದಿಂದ ಜನಜಾಗ್ರತಿಯನ್ನು ಕೈಕೊಂಡು ಇಟಲಿಯನ್ನು ಅಖಂಡಗೊಳಿಸಿದರು.

ಇಂದು ಆಧುನಿಕ ಸಮಾಜವಾದೀ ದೇಶಗಳಲ್ಲಿ ನಡೆಯುತ್ತಿರುವದಾದರೂ ಏನು ? ತಾವು ಸ್ವೀಕರಿಸಿದ ರಾಜಕೀಯ ಸಿದ್ಧಾಂತವನ್ನು ಕೃತಿಗಿಳಿಸಲು ಅವರು ಹೊಸ ಜನಾಂಗವನ್ನೇ ನಿರ್ಮಿಸುತ್ತಿದ್ದಾರೆ. ಅನಾದಿಕಾಲದಿಂದಲೂ ಮಾನವತೆಗೆ ಅಂಟಿಕೊಂಡ ದೇವರು—ಧರ್ಮ—ದೈವ ಮುಂತಾದ ಪಾರಂಪರಿಕ ವಿಚಾರಗಳನ್ನೇ ಕಿತ್ತೊಗೆದು, ಹೊಸ ಜೀವನ ಸಿದ್ಧಾಂತವನ್ನು ರಕ್ತಗತಗೊಳಿಸಲು ಶಿಕ್ಷಣವನ್ನೇ ಆಶ್ರಯಿಸಿದ್ದಾರೆ. ಕಳೆದ ಐವತ್ತು ವರುಷಗಳ ಶೈಕ್ಷಣಿಕ ಪ್ರಯೋಗದಿಂದ ರಶಿಯನ್ನರು ಹೊಸ ಜನಾಂಗವಾಗಿ ಮಾರ್ಪಟ್ಟಿದ್ದಾರೆ.

ಬ್ರಿಟಿಷರೂ ಇಂಥ ಕ್ರಿಯಾತ್ಮಕ ಶಿಕ್ಷಣವನ್ನು ಭಾರತೀಯರಿಗೆ ಕೊಟ್ಟಿದ್ದರೆ ಅವರು ನೂರೈವತ್ತು ವರುಷ ಭಾರತದಲ್ಲಿ ಆಳರಸರಾಗಿ ಉಳಿಯುತ್ತಿದ್ದಿಲ್ಲ. ಅವರು ಇಟ್ಟುಕೊಂಡ ಉದ್ದೇಶ ಸಮೃದ್ಧಿಗಾಗಿ ಇರದೆ ಬ್ರಿಟಿಷರ ಸೇವೆಗಾಗಿ ಇತ್ತು. ೧೯೪೭ರ ವರೆಗೂ ಅವರು ತಮ್ಮ ಸಿದ್ಧಾಂತವನ್ನು ಚಾಚೂ ತಪ್ಪದೇ ಅನುಸರಿಸಿದರು.

ಬ್ರಿಟಿಷ್ ಪ್ರಣೀತ ಶಾಸನಬದ್ಧ ಶಿಕ್ಷಣವು ೧೮೫೭ರಿಂದ ಪ್ರಾರಂಭವಾಯಿತೆನ್ನಬಹುದು. ಮುಂಬಯಿ, ಮದ್ರಾಸ, ಕಲಕತ್ತೆಗಳಲ್ಲಿ ಏಕಕಾಲಕ್ಕೆ ಮೂರು ವಿಶ್ವವಿದ್ಯಾಲಯಗಳು ಸ್ಥಾಪಿತವಾದವು. ಅವುಗಳ ಮುಖ್ಯ ಧ್ಯೇಯವು, ಬ್ರಿಟಿಷ್ ಆಡಳಿತಕ್ಕೆ ಬೇಕಾದ ಕಾರಕೂನರನ್ನು ನಿರ್ಮಿಸುವದಾಗಿತ್ತು. ಆದ್ದರಿಂದ ಬ್ರಿಟಿಷರು ಅದಕ್ಕನುಗುಣವಾದ ಅಭ್ಯಾಸ ಕ್ರಮವನ್ನು ಅನುಸರಿಸಿದರು. ಇಂಗ್ಲೀಷ ಭಾಷಾಧ್ಯಯನ, ಇಂಗ್ಲೀಷ ಸಾಹಿತ್ಯ ಸಂಸ್ಕೃತಿಗಳ ಅಭ್ಯಾಸ ಮುಖ್ಯವಾಗಿದ್ದವು. ಭಾರತೀಯ ಭಾಷೆ-ಸಂಸ್ಕೃತಿ–ಸಾಹಿತ್ಯಗಳು ಬೇಕೆಂತಲೇ ದುರ್ಲಕ್ಷಿಸಲ್ಪಟ್ಟವು. ಇಂಗ್ಲೀಷ ಶಿಕ್ಷಣ ಪಡೆದ ತರುಣರು ಬ್ರಿಟಿಷ್ ಆಡಳಿತಕ್ಕೆ ನೆರವಾಗುತ್ತ ಅಶಿಕ್ಷಿತ ಭಾರತೀಯರನ್ನು ಸಾಮ್ರಾಜ್ಯದ ನೊಗಕ್ಕೆ ಜೋಡಿಸುವ ಕೊಂಡಿಯಾದರು. ಬ್ರಿಟಿಷ್ ವೇಷ ಭೂಷಣಗಳಲ್ಲಿ ವಿಭೂಷಿತರಾಗಿ ಕೈಕೆಸರಾಗದ ಆಫೀಸ್ ಕೆಲಸಮಾಡಿ ಹಾಯಾದ ಜೀವನ ಸಾಗಿಸುವದು ಸುಶಿಕ್ಷಿತರ ಜೀವನದ ಗುರಿಯಾಯಿತು. ಇಂಥ ಜೀವನ ವೈಯುಂಡಂತೆ ಸ್ವತಃ ಭಾರತೀಯರಿಗೆ ತಮ್ಮ ಸಾಂಪ್ರದಾಯಿಕ ಜೀವನ ಸೇರದಾಯಿತು. ಸ್ವಭಾಷಾ ಪ್ರೇಮ. ಸ್ವಜನಾಭಿಮಾನ ಮಾಯವಾದವು. ಇಂಗ್ಲಂಡು ಇಂಥ ಭಾರತೀಯರ ಸ್ಫೂರ್ತಿ ಕೇಂದ್ರವಾಯಿತು. ಸಾಕ್ಷಾತ್ ಪರಶಿವನೇ ಭಾರತೀಯರ ಉದ್ಧಾರದಲ್ಲಿ ಬಂದ ಬಗೆ. ಹಣದ ಅಡಚಣಿಯನ್ನು ಮುಂದು ಮಾಡಿ ಆಯಾ ಶೈಕ್ಷಣಿಕ ಸುಧಾರಣೆಗಳನ್ನು ಮುಂದು ಹಾಕಿದ್ದನ್ನು ಸ್ಪಷ್ಟವಾಗಿ ಕಾಣಬಹುದು. ಸ್ವತಂತ್ರ ಭಾರತದ ಶೈಕ್ಷಣಿಕ ಸಾಧನೆ ಸಾಹಸ

ಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಬ್ರಿಟಿಷ್ ನಿರ್ಮಿತ ತಜ್ಞ ಸಮಿತಿಗಳ ವರದಿಯ ಸಂಕ್ಷಿಪ್ತ ಅವಲೋಕನ ಗೈಯುವದು ಉಪಯುಕ್ತವಾಗಿದೆ.

ಈಸ್ಟ್ ಇಂಡಿಯಾ ಕಂಪನಿಯು ರಾಜಕೀಯ ಶಕ್ತಿಯಾಗಿ ೧೭೫೭ರ ಪ್ಲಾಸಿ ಯುದ್ಧದ ನಂತರ ಭಾರತದ ಆಡಳಿತವನ್ನು ನಿರ್ವಹಿಸಲು ಪ್ರಾರಂಭವಾಯಿತು. ಮುಂದೆ ಒಂದು ಶತಮಾನ ಅಂದರೆ ೧೮೫೮ರ ವರೆಗೆ, ಬ್ರಿಟಿಷ್ ಪಾರ್ಲಿಮೆಂಟು ಭಾರತೀಯ ರಾಜಸತ್ತೆಯನ್ನು ಸ್ವೀಕರಿಸುವರೆಗೆ, ಈಸ್ಟ್ ಇಂಡಿಯಾ ಕಂಪನಿಯ ಶೈಕ್ಷಣಿಕ ಸಾಧನೆಯು ಶಾಸನಬದ್ಧವಾಗಿದ್ದಿಲ್ಲವೆಂದೇ ಹೇಳಬೇಕು. ಭಾರತದ ಬೇರೆ ಬೇರೆ ಸಂಸ್ಥಾನಿಕರನ್ನೂ ಬೇರೆ ಬೇರೆ ಕಾರಣ ಗಳನ್ನು ಮುಂದೆ ಮಾಡಿ, ಬ್ರಿಟಿಷ್ ಸತ್ತೆಯ ಅಡಿಯಲ್ಲಿ ತರು ವಲ್ಲಿಯೇ ಕಂಪನಿ ಸರಕಾರದ ಆರ್ಥಿಕ ಮುಗ್ಗಟ್ಟಿನ ಲಾಭ ಪಡೆದು, ತನ್ನ ಆಡಳಿತವನ್ನು ಭಾರತದ ಮೇಲೆ ಹೇರಿತು. ಬ್ರಿಟಿಷ್ ಶೈಕ್ಷಣಿಕ ನೀತಿಯು ಶಾಸನಬದ್ಧವಾಗಿ ಕಾರ್ಯರೂಪ ದಲ್ಲಿ ಬರಹತ್ತಿದ್ದು ಬ್ರಿಟಿಷ್ ಪಾರ್ಲಿಮೆಂಟು ಭಾರತದ ಆಡಳಿತ ವನ್ನು ನೇರವಾಗಿ ತನ್ನ ಕೈಯಲ್ಲಿ ತೆಗೆದುಕೊಂಡಂದಿನಿಂದಲೇ.

(ಅ) ೧೮೫೪ರ ಉಡ್ಡನ ಪರಿಪತ್ರ: ಈಸ್ಟ್ ಇಂಡಿಯಾ ಕಂಪನಿಗೆ ಭಾರತದ ಶೈಕ್ಷಣಿಕ ಭಾರಹೊರುವದು ಬೇಡವಾಗಿ ಇದೇ ಸಮಯದಲ್ಲಿ ಭಾರತದಲ್ಲಿ ಧರ್ಮಾಂತರದಲ್ಲಿ ತೊಡಗಿದ ಮಿಶನರಿಗಳು ಖಾಸಗಿಯಾಗಿ ಶಾಲೆ-ಕಾಲೇಜುಗಳನ್ನು ತೆರೆದು ತಮ್ಮ ಪ್ರಚಾರಕ್ಕೆ ಹೊಸರೂಪ ಕೊಡುವದರಲ್ಲಿ ಮಗ್ನರಾಗಿ

ದ್ದರು. ಶೈಕ್ಷಣಿಕ ಹೊಣೆಯನ್ನು ಹೊರಲು ಅನಾಸಕ್ತಿ ತೋರಿಸಿದ ಕಂಪನಿಯ ಧೋರಣೆಯು ಇವರಿಗೆ ಅನುಕೂಲವಾಯಿತು. ಅಲೆಕ್ಝಾಂಡರ ಡಫ್‌ನೆಂಬ ಮಿಶನರಿಯು ಉಡ್ ಸಮಿತಿಯೆದುರು ಖಾಸಗೀ ಸಂಸ್ಥೆಗಳಿಗೆ, ಅಂದರೆ ತಮಗೆ, ನೇರವಾಗಿ ಸಹಾಯ ಸಲ್ಲಿಸಿದರೆ ತಾವು ಶೈಕ್ಷಣಿಕ ವಿಸ್ತಾರದ ಭಾರಹೊರುವದಾಗಿ ಬೇಡಿಕೆಯನ್ನಿಟ್ಟ. ಉಡ್ ಸಮಿತಿಯು ಅನಾಯಾಸವಾಗಿ ಈ ಅವಕಾಶದ ಲಾಭಪಡೆದು ಖಾಸಗೀ ಸಂಸ್ಥೆಗಳಿಗೆ ಪ್ರೋತ್ಸಾಹನೆಯನ್ನೀಯುವ ಶಿಫಾರಸನ್ನು ಮಾಡಿತು. ಮತ್ತು ಬ್ರಿಟಿಷ್ ರಾಜ್ಯಾಡಳಿತದ ಮುಖ್ಯ ಮೈಲುಗಲ್ಲಾಗಿ ಕೆಲವು ಪ್ರಾಂತಗಳಲ್ಲಿ ಸಾರ್ವಜನಿಕ ವಿದ್ಯಾ ಖಾತೆಯು (Department of Public Instruction) ಅಸ್ತಿತ್ವದಲ್ಲಿ ಬರಬೇಕೆಂದೂ, ಅದಕ್ಕೊಬ್ಬ ಹಿರಿಯ ಅಧಿಕಾರಿ ಇರಬೇಕೆಂದೂ, ಮುಂಬಯಿ, ಮದ್ರಾಸ, ಕಲಕತ್ತೆಗಳಲ್ಲಿ ಸ್ವತಂತ್ರ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕೆಂದೂ ಮತ್ತು ಅವುಗಳ ಮುಖ್ಯ ಕಾರ್ಯ–ಪರೀಕ್ಷೆ ನಡೆಯಿಸುವದು ಹಾಗು ಪದವಿಗಳನ್ನು ದಯಪಾಲಿಸುವದೂ ಆಗಿರಬೇಕೆಂದು ಸಲಹೆ ಮಾಡಿತು. ಆದರಂತೆ ಭಾರತದಲ್ಲಿ ಮೊಟ್ಟಮೊದಲು ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣವೂ ಮತ್ತು ವಿದ್ಯಾಖಾತೆಯ ಆಡಳಿತವೂ ೧೮೫೭ರ ಸುಮಾರು ಪ್ರಾರಂಭವಾದವು.

(೬) ೧೮೮೨ರ ಹಂಟರ ಕಮೀಶನ್ : ಮಾಧ್ಯಮಿಕ ಶಿಕ್ಷಣದ ವಿಸ್ತಾರ, ಅವುಗಳಿಗೆ ಕೊಡುವ ಸಹಾಯ ಧನ, ಮಾಧ್ಯಮಿಕ ಶಿಕ್ಷಣ ರಂಗದಲ್ಲಿ ಸರಕಾರದ ಪಾತ್ರ, ವೃತ್ತಿಶಿಕ್ಷಣ ಮುಂತಾದ ಮಹತ್ವದ ವಿಷಯಗಳ ಮೇಲೆ ಶಿಫಾರಸುಗಳನ್ನು ಮಾಡಿತು.

(೧) ಮಾಧ್ಯಮಿಕ ಶಿಕ್ಷಣವು ಸಹಾಯಧನ ಪದ್ಧತಿಯನ್ನು ಅವಲಂಬಿಸಿರಬೇಕು.

(೨) ಸರಕಾರವು ಮಾಧ್ಯಮಿಕ ಕ್ಷೇತ್ರದಿಂದ ಸಾಧ್ಯವಾದಷ್ಟು ಬೇಗ ಹಿಂದೆಗೆಯಬೇಕು.

(೩) ವಿವಿಧ ವೃತ್ತಿ ಶಿಕ್ಷಣವನ್ನು ಕಾರ್ಯರೂಪದಲ್ಲಿ ತರಬೇಕು.

ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ಶಿಫಾರಸುಗಳು ಕಾರ್ಯಗತವಾಗದೇ ಉಳಿದವು. ಸಹಾಯಧನ ಪದ್ಧತಿಯಿಂದ ಖಾಸಗೀ ಸಂಸ್ಥೆಗಳಿಗೇನೋ ಪ್ರೋತ್ಸಾಹ ಸಿಕ್ಕಿತು. ಆದರೆ ಇದರಿಂದ ಸರಕಾರದ ಶೈಕ್ಷಣಿಕ ಹೊಣೆಯು ಮಾತ್ರ ಕಡಿಮೆಯಾಗುತ್ತ ನಡೆಯಿತು.

(ಕ) ೧೯೦೨ರ ಯುನಿವ್ಹರ್ಸಿಟಿ ಕಮಿಶನ್: ಇದರ ಶಿಫಾರಸಿನನ್ವಯ ಮಾಧ್ಯಮಿಕ ಶಿಕ್ಷಣವು ವಿಶ್ವವಿದ್ಯಾಲಯದ ಆಡಳಿತಕ್ಕೆ ಒಳಗಾಯಿತು. ೧೯೦೪ರಲ್ಲಿ ಪಾಸಾದ ವಿಶ್ವವಿದ್ಯಾಲಯದ ಕಾಯದೆಯಂತೆ ಮಾಧ್ಯಮಿಕ ಶಾಲೆಗಳಿಗೆ ಮನ್ನಣೆ ಕೊಡುವ ವಿಷಯವನ್ನು ವಿಶ್ವವಿದ್ಯಾಲಯಗಳಿಗೆ ಬಿಟ್ಟುಕೊಡಲಾಯಿತು. ಇದರಿಂದ ಮಾಧ್ಯಮಿಕ ಶಾಲೆಗಳು ವಿಶ್ವವಿದ್ಯಾಲಯಕ್ಕೆ ಅಧೀನವಾಗಿ ನಡೆದುಕೊಳ್ಳಬೇಕೆಂಬುದು ಇಂದಿನ ಕಲ್ಪನೆಗೆ ಅಂದರೆ ಮಾಧ್ಯಮಿಕ ಶಾಲೆಗಳು ಮತ್ತು ಅವುಗಳ ಶಿಕ್ಷಣವು ಸ್ವತಂತ್ರವೂ ಸ್ವಯಂಪೂರ್ಣವೂ ಆಗಿರಬೇಕೆಂಬ ವಿಚಾರಕ್ಕೆ—ವಿರುದ್ಧವಾಗಿತ್ತು. ಇಲ್ಲಿಯು ಸರಕಾರವು ತನ್ನ ಹೊಣೆಯನ್ನು ಹಗುರುಮಾಡಿಕೊಳ್ಳುವ ಪ್ರಯಾಸದಲ್ಲಿದ್ದುದು ಕಂಡು ಬರುವದು.

(ಡ) ೧೯೧೭ರ ಕಲಕತ್ತಾ ಯುನಿವ್ಹರ್ಸಿಟಿ ಕಮಿಶನ್: ಈ ಕಮಿಶನ್ನಿನ ಕಾರ್ಯವ್ಯಾಪ್ತಿ ಕಲಕತ್ತಾ ವಿಶ್ವವಿದ್ಯಾಲಯಕ್ಕಷ್ಟೇ ಸೀಮಿತವಿದ್ದರೂ, ಇದರ ವರದಿಯನ್ನು ಉಳಿದ ವಿಶ್ವವಿದ್ಯಾಲಯಗಳು ಅಂಗೀಕರಿಸಿದ್ದರಿಂದ ಇದಕ್ಕೆ ವಿಶೇಷ ಮಹತ್ವ ಪ್ರಾಪ್ತವಾಯಿತು. ಈಗಾಗಲೇ ಮಾಧ್ಯಮಿಕ ಶಿಕ್ಷಣವು ವಿಶೇಷವಾಗಿ ಬೆಳೆದು, ಮಾಧ್ಯಮಿಕ ಹಾಗು ವಿಶ್ವವಿದ್ಯಾಲಯದ ಮಟ್ಟ ಕೆಳಗಿಳಿಯುತ್ತಿದ್ದುದು ಕಂಡುಬಂತು. ಈ ಕಮಿಶನ್ನು, ಇದನ್ನು ಪ್ರಸ್ತಾಪಿಸುತ್ತ–ವಿಶ್ವವಿದ್ಯಾಲಯದ ಮಟ್ಟ ಉಚ್ಚಮಟ್ಟದಲ್ಲಿ ಉಳಿಯಬೇಕಾದರೆ ಮಾಧ್ಯಮಿಕ ಶಿಕ್ಷಣವು ಸುಧಾರಿಸುವದು ಅವಶ್ಯವೆಂದು ಅಭಿಪ್ರಾಯ ಪಟ್ಟಿತು. ಹಾಗೆಯೇ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಮೊಟ್ಟಮೊದಲಾಗಿ ಇಂಟರಮೀಡಿಯೇಟ ಕಾಲೇಜುಗಳನ್ನು ಸ್ಥಾಪಿಸಬೇಕೆಂದು ಶಿಫಾರಸುಮಾಡಿ ಅವುಗಳನ್ನು ನೋಡಿಕೊಳ್ಳಲು ಒಂದು ಶೈಕ್ಷಣಿಕ ಸಮಿತಿ (Board of Education) ಇರಬೇಕೆಂದು ಸೂಚಿಸಿತು. ವಿಶ್ವವಿದ್ಯಾಲಯದ ಮಟ್ಟ ಕಾಯ್ದುಕೊಂಡುಹೋಗುವ ಭರದಲ್ಲಿ. ಮಾಧ್ಯಮಿಕ ಶಿಕ್ಷಣದ ಹೊಣೆಯನ್ನೇ ಹೊರಲು ತಯಾರಿಲ್ಲದ ಸರಕಾರ, ಇಂಟರಮೀಡಿಯೇಟ ಕಾಲೇಜುಗಳ ನಿರ್ಮಾಣಕ್ಕೆ ಒಪ್ಪಿಗೆ ಕೊಟ್ಟು. ಅವುಗಳ ವ್ಯವಸ್ಥೆಯನ್ನು ವಿಶ್ವವಿದ್ಯಾಲಯದಿಂದ ಬೇರ್ಪಡಿಸಿ ಒಂದು ಪ್ರತ್ಯೇಕ ಸಮಿತಿಗೆ ಒಪ್ಪಿಸಿದ್ದು ಅಸಮಂಜಸವೆಂಬುದು ಹಿಂದಿನಿಂದ ತಿಳಿದು ಬಂತು.

(ಇ) ೧೯೨೯ರ ಹಾರ್ಟಾಗ್ ಕಮೀಟಿ: ಈ ಕಮೀಟಿಯ ಅಭಿಪ್ರಾಯದಂತೆ ವಿಶ್ವವಿದ್ಯಾಲಯದಿಂದ ನಡೆಸಲ್ಪಡುತ್ತಿರುವ

ಮ್ಯಾಟ್ರಿಕ್ ಪರೀಕ್ಷೆಯು ಇಡೀ ಮಾಧ್ಯಮಿಕ ಶಿಕ್ಷಣ ಕ್ರಮವನ್ನು ಹಾಗು ಅಭ್ಯಾಸ ಕ್ರಮವನ್ನು ನಿಯಂತ್ರಿಸುತ್ತದೆ. ಆದಕ್ಕಾಗಿ ಇನ್ನು ಮುಂದೆ ವಿವಿಧ ಬಗೆಯ ವಿಷಯಗಳನ್ನೂ: ವಿಸ್ತಾರವಾದ ಅಭ್ಯಾಸ ಕ್ರಮವನ್ನೂ ಅನುಸರಿಸಬೇಕೆಂದು ಅಭಿಪ್ರಾಯಪಟ್ಟಿತು. ೧೮೮೨ರಲ್ಲಿಯೇ ಹಂಟರ್ ಕಮೀಶನ್ನಿನಿಂದ ಶಿಫಾರಸು ಹೊಂದಿದ್ದರೂ, ವಿವಿಧೋದ್ದೇಶ ಶಿಕ್ಷಣ ಕ್ರಮವು ಇದುವರೆಗೂ ದುರ್ಲಕ್ಷಿಸಲ್ಪಟ್ಟಿತ್ತು. ತದನಂತರವೂ ಅದು ಮೊದಲಿನಂತೆಯೇ ಉಪೇಕ್ಷಿಸಲ್ಪಟ್ಟಿತು.

(ಫ) ೧೯೩೪ರ ಸಪ್ರು ಕಮಿಟಿ: ಯು. ಪಿ. ಸರಕಾರದಿಂದ ನೇಮಿಸಲ್ಪಟ್ಟಿದ್ದ ಈ ಸಮಿತಿಯು. ಮೊಟ್ಟಮೊದಲು. ಭಾರತದಲ್ಲಿ ವಿಶ್ವವಿದ್ಯಾಲಯದ ಶಿಕ್ಷಣ ಪಡೆದವರು ನಿರುದ್ಯೋಗಿಗಳಾಗುತ್ತಿದ್ದಾರೆಂಬ ಮಾತನ್ನು ಒತ್ತಿ ಹೇಳಿತು. ಅದರ ನಿವಾರಣೆಗಾಗಿ ಹಂಟರ್ ಕಮೀಶನ್ ಹಾಗು ಹಾರ್ಟಾಗ್ ಕಮಿಟಿಯವರು ಶಿಫಾರಸು ಮಾಡಿದ ವಿವಿಧೋದ್ದೇಶ ಶಿಕ್ಷಣ ಕ್ರಮವನ್ನು ಬಳಕೆಯಲ್ಲಿ ತರಬೇಕೆಂದೂ. ಮಾಧ್ಯಮಿಕ ಶಿಕ್ಷಣವನ್ನು ಸ್ವತಂತ್ರ ಮತ್ತು ಸ್ವಯಂಪೂರ್ಣವುಳ್ಳದ್ದಾಗಿ ಮಾಡಬೇಕೆಂದೂ ಹೇಳಿತು. ಹಾಗೆಯೇ ಮಾಧ್ಯಮಿಕ ಮಟ್ಟದಲ್ಲಿ ತಾಂತ್ರಿಕ. ವಾಣಿಜ್ಯ, ಔದ್ಯೋಗಿಕ ಮತ್ತು ವೃತ್ತಿ ಶಿಕ್ಷಣವನ್ನು ಪ್ರಾರಂಭಮಾಡಬೇಕೆಂದು ಅಭಿಪ್ರಾಯಪಟ್ಟಿತು.

೧೯೩೭ರ ವರೆಗೂ ಶಿಕ್ಷಣವು ಹೇಗೆ ಏಕಮುಖವಾಗಿ ನಡೆದಿತ್ತೆಂಬುದನ್ನೂ ಅದರ ನೇರ ಪರಿಣಾಮವಾಗಿ ಸುಶಿಕ್ಷಿತರ ನಿರು

ದ್ಯೋಗವು ಹೇಗೆ ಹುಟ್ಟಿಕೊಂಡಿತೆಂಬುದನ್ನೂ ಕಾಣಬಹುದು. ಹಂಟರ್ ಕಮಿಶನ್ನಿನಿಂದ ಮೊದಲ್ಗೊಂಡು ಇದುವರೆಗೂ ನಿಯಮಿತವಾದ ಹಲವಾರು ಆಯೋಗಗಳು, ವಿವಿಧೋದ್ದೇಶ ತಾಂತ್ರಿಕ, ವಾಣಿಜ್ಯ ಹಾಗು ಔದ್ಯೋಗಿಕ ಶಿಕ್ಷಣ ಪ್ರಾರಂಭಿಸಬೇಕೆಂದು ಶಿಫಾರಸುಗಳ ಮೇಲೆ ಶಿಫಾರಸುಗಳನ್ನು ಮಾಡಿದರೂ ಬ್ರಿಟಿಷ್ ಸರಕಾರ ಕಣ್ತೆರೆಯಲಿಲ್ಲ.

(ಜಿ) ೧೯೩೭ರ ಆಬಟ್-ಉಡ್ ರಿಪೋರ್ಟ: ಸುಶಿಕ್ಷಿತರಲ್ಲಿ ಬೆಳೆಯುತ್ತಿರುವ ನಿರುದ್ಯೋಗಿತನ, ದೇಶದಲ್ಲಿ ನೆಲೆಸಿದ ಉದ್ಯೋಗಾವಕಾಶಗಳ ಕೊರತೆ, ವಿವಿಧ ಉದ್ಯೋಗ ದಂಧೆಗಳಿಗೆ ಸಂಬಂಧಿಸಿದ ಶಿಕ್ಷಣದ ಅಭಾವ ಇವೆಲ್ಲವುಗಳಿಂದಾಗಿ ಬ್ರಿಟಿಷ್ ಶಿಕ್ಷಣ ಪದ್ಧತಿಯಲ್ಲಿ ಜನರು ದೋಷಗಳನ್ನು ಹುಡುಕುತ್ತಿದರು. ಸರಕಾರವು ತೀವ್ರ ಟೀಕೆಗೆ ಒಳಗಾಯಿತು. ಇದನ್ನು ಗಮನಿಸಿ ಬ್ರಿಟಿಷ್ ಸರಕಾರವು ಇಂಗ್ಲಂಡದ ಇಬ್ಬರು ತಜ್ಞರನ್ನು ಭಾರತಕ್ಕೆ ಬರಮಾಡಿಕೊಂಡು ಅವರ ಅಭಿಪ್ರಾಯ ಕೇಳಿತು. ಇವರಾದರೂ ಕೂಡಾ ಸಾಮಾನ್ಯ ಶಿಕ್ಷಣಕ್ಕೆ ಸರಿಜೋಡಾಗಿ ಬೇರೆ ಬೇರೆ ವೃತ್ತಿ ಶಿಕ್ಷಣವನ್ನು ಕೊಡಬೇಕೆಂದು ಅಭಿಪ್ರಾಯಪಟ್ಟರು. ಈ ಸಾರಿ ಮಾತ್ರ ಸರಕಾರ ತಲೆಬಾಗಿ ತಾಂತ್ರಿಕ ಶಿಕ್ಷಣ ಕಾಲೇಜುಗಳನ್ನು (Polytechnics) ತೆರೆಯಬೇಕಾಯಿತು. ಹಾಗೆಯೇ ತಾಂತ್ರಿಕ-ವಾಣಿಜ್ಯ-ಒಕ್ಕಲುತನ ಶಿಕ್ಷಣವೀಯುವ ಮಾಧ್ಯಮಿಕ ಶಾಲೆಗಳೂ ಸ್ಥಾಪಿತವಾದವು. ಸರಕಾರ ನಿರುದ್ಯೋಗ ನಿವಾರಣೆಗೆಂದು ತನ್ನ ಏಮುಖದ ಶಿಕ್ಷಣ ಪದ್ಧತಿಯನ್ನು ಬದಲಾಯಿಸಿದ್ದು, ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಕೇವಲ ಹತ್ತು ವರುಷ

ಗಳ ಮೊದಲು! ಇದರಿಂದ ಬ್ರಿಟಿಷರ ಶೈಕ್ಷಣಿಕ ನೀತಿಯು ತಾನಾಗಿಯೇ ಸ್ಪಷ್ಟವಾಗುವದು.

(ಪ) ೧೯೪೪ರ ಸಾರ್ಜಂಟ್ ರಿಪೋರ್ಟ್: ಎರಡನೇ ಮಹಾಯುದ್ಧದ ನಂತರ ಭಾರತದ ಶೈಕ್ಷಣಿಕ ಅಭಿವೃದ್ಧಿಗಾಗಿ ಒಂದು ಮಹಾಯೋಜನೆಯು ತಯಾರಿಸಲ್ಪಟ್ಟಿತು. ಆ ಯೋಜನೆಯಂತೆ ಭಾರತದಲ್ಲಿ ಮೊದಲು ಬಾರಿಗೆ ಸಾರ್ವತ್ರಿಕ ಪುಕ್ಕಟೆ ಪ್ರಾಥಮಿಕ ಶಿಕ್ಷಣ ಕೊಡುವದನ್ನು ಸೂಚಿಸಲಾಯಿತು. ವಿದ್ಯಾರ್ಥಿಗಳು ೧೧ನೇ ವಯಸ್ಸಿನಿಂದ ಮುಂದೆ ಐದು ವರುಷ ಗಳವರೆಗೆ ವಿವಿಧ ಬಗೆಯ ಅಭ್ಯಾಸಕ್ರಮಗಳನ್ನು ಕೈಗೆತ್ತಿಕೊಳ್ಳಲು ಶಿಫಾರಸು ಮಾಡಿತು. ಮಾಧ್ಯಮಿಕ ಶಾಲೆಯಿಂದ ಔದ್ಯೋಗಿಕ ತಾಂತ್ರಿಕ, ವಾಣಿಜ್ಯ ವಿದ್ಯಾಭ್ಯಾಸಗೈಯುವ ವಿದ್ಯಾರ್ಥಿಗಳು ನೇರ ವಾಗಿ ವಿಶ್ವವಿದ್ಯಾಲಯಗಳನ್ನು ಪ್ರವೇಶಿಸಬಹುದೆಂದೂ ಅಭಿ ಪ್ರಾಯಪಟ್ಟಿತು.

ಆದರೆ ಈ ರಿಪೋರ್ಟಿನಲ್ಲಿ ಅಡಕವಾದ ಶಿಫಾರಸುಗಳನ್ನು ಅಂಗೀಕರಿಸುವಷ್ಟು ತಾಳ್ಮೆಯಾಗಲೀ, ಹಣಕಾಸಿನ ಸುಸ್ಥಿತಿ ಯಾಗಲೀ ಸರಕಾರಕ್ಕೆ ಇದ್ದಿಲ್ಲ. ೧೯೪೨ರ ರಾಜಕೀಯ ಆಂದೋಲನದಿಂದ ದೇಶದಲ್ಲಿಯ ಸ್ಥಿತಿ ಸ್ಫೋಟಕವಾಗಿತ್ತು. ಮಹಾಯುದ್ಧದಲ್ಲಿ ಗೆದ್ದರೂ ಭಾರತವನ್ನು ತನ್ನ ಹಿಡಿತದಲ್ಲಿಟ್ಟು ಕೊಳ್ಳುವ ಶಕ್ತಿ ಬ್ರಿಟಿಷ್ ಸರಕಾರಕ್ಕೆ ಇದ್ದಿಲ್ಲ. ಲೇಬರ್ ಪಕ್ಷದ ಉದಾರ ಧೋರಣೆಯ ಪರಿಣಾಮವಾಗಿ ಆಟ್ಲೀ ಸರಕಾರವು ಭಾರತೀಯ ಧುರೀಣರೊಂದಿಗೆ ಅಧಿಕಾರ ಹಸ್ತಾಂತರಗೊಳಿಸುವ

ಮಾತುಕತೆಗಳನ್ನು ಪ್ರಾರಂಭಿಸಿತು. ಕೊನೆಗ ೧೯೪೭ ಆಗಸ್ಟ ೧೫ಕ್ಕೆ ಭಾರತ–ಪಾಕಿಸ್ತಾನಗಳನ್ನು ನಿರ್ಮಿಸಿ ಅವೆರಡಕ್ಕೂ ಸ್ವಾತಂತ್ರ್ಯ ಕೊಟ್ಟಿತು.

ಮೇಲಿನ ವರದಿಗಳ ವಿವೇಚನೆಯಿಂದ ಕಂಡುಬರುವ ಮುಖ್ಯಾಂಶಗಳೇನಂದರೆ :–(೧) ಬ್ರಿಟಿಷರು ಕೊಡ ಮಾಡಿದ ಶಿಕ್ಷಣವು ಕೇವಲ ಅಕ್ಷರಾಭ್ಯಾಸ ಶಿಕ್ಷಣವಾಗಿತ್ತು. (೨) ಅದು ಹೆಚ್ಚಾಗಿ ಇಂಗ್ಲೀಷ್ ಪ್ರಾಧಾನ್ಯ ಶಿಕ್ಷಣವಾಗಿತ್ತು. (೩) ಭಾರತೀಯ ಭಾಷೆ–ಸಾಹಿತ್ಯ–ಸಂಸ್ಕೃತಿ ತತ್ವಗಳು ಬೇಕೆಂತಲೇ ದುರ್ಲಕ್ಷಿಸಲ್ಪಟ್ಟವು. (೪) ಏಕಮುಖ ಶಿಕ್ಷಣದ ಪರಿಣಾಮವಾಗಿ ಸುಶಿಕ್ಷಿತರಲ್ಲಿ ನಿರುದ್ಯೋಗವು ಬೆಳೆಯಹತ್ತಿತು. (೫) ವಿವಿಧ ವೃತ್ತಿಗಳ ಶಿಕ್ಷಣವನ್ನು ಬ್ರಿಟಿಷ್ ಸರಕಾರ ಪ್ರೋತ್ಸಾಹಿಸಲಿಲ್ಲ. (೬) ಸಂಪೂರ್ಣ ಶೈಕ್ಷಣಿಕ ಹೊಣೆಯನ್ನು ಬ್ರಿಟಿಷ್ ಸರಕಾರ ಎಂದೂ ಹೊರಲಿಲ್ಲ. (೭) ಕಾಲಾಂತರದಲ್ಲಿ ಇಂಗ್ಲೀಷ್–ಶಿಕ್ಷಿತರ ಒಂದು ವರ್ಗವೇ ನಿರ್ಮಾಣವಾಯಿತು. (೮) ಸಾಮಾನ್ಯ ಜನತೆಯನ್ನು ಬ್ರಿಟಿಷ್ ಶಿಕ್ಷಣ ಪದ್ಧತಿಯು ಬಹು ದೂರವಿಟ್ಟಿತು.

———

೩. ವರ್ಧಾ ಶಿಕ್ಷಣ

ಬ್ರಿಟಿಷ್ ಶಿಕ್ಷಣದ ವಿಫಲತೆಯನ್ನು ಕಂಡು ನೊಂದು ಕೊಂಡವರಲ್ಲಿ ಗಾಂಧೀಜಿಯವರು ಪ್ರಮುಖರು. ಅವರು ದಕ್ಷಿಣ ಆಫ್ರಿಕೆಯಲ್ಲಿದ್ದಾಗ ಫೋಯಿನಿಕ್ಸ ಮತ್ತು ಟಾಲಸ್ಟಾಯ ಆಶ್ರಮಗಳಲ್ಲಿ ಅಲ್ಲಿಯ ಆಶ್ರಮವಾಸಿಗಳ ಮಕ್ಕಳಿಗೆ ಶಿಕ್ಷಣ ಕೊಡುವ ಪ್ರಸಂಗ ಒದಗಿ ಬಂತು. ಮೊದಲಿನಿಂದಲೂ ಬ್ರಿಟಿಷ್ ಶಿಕ್ಷಣದ ವಿಷಯವಾಗಿ ಇದ್ದ ತಿರಸ್ಕಾರದ ಭಾವನೆಯು ಈಗ ಅವರನ್ನು ವಿಚಾರಪರರನ್ನಾಗಿ ಮಾಡಿತು. ಅವರು ಸ್ವತಃ ಬ್ರಿಟಿಷ್ ಪದ್ಧತಿಯ ಶಿಕ್ಷಣ ಪಡೆದವರಾದ್ದರಿಂದ ಅದರಲ್ಲಿಯ ಮುಖ್ಯ ದೋಷಗಳನ್ನು ಗುರುತಿಸಲು ಸಾಧ್ಯವಾಯಿತು.

ದೋಷಗಳು :

೧) ಅದು ಸಂಪೂರ್ಣ ಅಕ್ಷರಾಭ್ಯಾಸವೀಯುವ ಶಿಕ್ಷಣವಾಗಿತ್ತು.

೨) ಸಾಮಾಜಿಕ ಪರಿಸರದಿಂದ ಶಿಕ್ಷಣವು ದೂರ ವಾಗಿತ್ತು.

೩) ದೈಹಿಕ ಚಟುವಟಿಕೆಗಳಿಗೆ ಆಸ್ಪದವಿದ್ದಿಲ್ಲ.

೪) ಹೃದಯ ಸಂಸ್ಕಾರಕ್ಕೆ ಅವಕಾಶವಿದ್ದಿಲ್ಲ.

೫) ಸಾರ್ವತ್ರಿಕ ಶಿಕ್ಷಣವು ದುರ್ಲಕ್ಷಿಸಲ್ಪಟ್ಟಿತ್ತು.

೬) ಬ್ರಿಟಿಷ್ ಶಿಕ್ಷಣವು ಭಾರತೀಯರ ಜೀವನದಿಂದ ಸಂಪೂರ್ಣ ಭಿನ್ನವಾಗಿತ್ತು.

೭) ಹಳ್ಳಿಗರ ನಾಡಾದ ಭಾರತದಲ್ಲಿ ಹಳ್ಳಿಗರ ಜೀವನ ಕ್ಕೊಗ್ಗುವ ಶಿಕ್ಷಣ ಅದಾಗಿದ್ದಿಲ್ಲ.

೮) ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣವು ಲುಪ್ತ ವಾಗಿತ್ತು.

೯) ಅಕ್ಷರಾಭ್ಯಾಸದ ಶಿಕ್ಷಣವಾದರೂ ಬಹಳ ಖರ್ಚಿನ ದಾಗಿತ್ತು.

೧೦) ತಾಯಿನುಡಿಗೆ ಬ್ರಿಟಿಷ್ ಪದ್ಧತಿಯಲ್ಲಿ ಸ್ಥಾನ ವಿದ್ದಿಲ್ಲ.

ಬ್ರಿಟಿಷ್ ಶಿಕ್ಷಣ ಪದ್ಧತಿಯ ಈ ದೋಷಗಳ ಅರಿವಿನ ಹಿನ್ನೆಲೆಯಲ್ಲಿ ಗಾಂಧೀಜಿಯವರು ತಮ್ಮ ಶೈಕ್ಷಣಿಕ ಪ್ರಯೋಗ ವನ್ನು ೧೯೦೪ರಲ್ಲಿ ಸ್ಥಾಪಿತವಾದ ಫೀಯಿನಿಕ್ಸ ಆಶ್ರಮದಲ್ಲಿ ಪ್ರಾರಂಭಿಸಿದರು. ಮುಂದೆ ೧೯೧೧ರಲ್ಲಿ ಸ್ಥಾಪಿತವಾದ ಟಾಲ ಸ್ಟಾಯ್ ಫಾರ್ಮಿನಲ್ಲಿ ತಮ್ಮ ಪ್ರಯೋಗ ಮುಂದುವರಿಸಿದರು. ಸ್ವತಃ ತಮ್ಮ ನಾಲ್ಕು ಜನ ಮಕ್ಕಳನ್ನು ಇತರ ಮಕ್ಕಳೊಂದಿಗೆ ತಮ್ಮ ಪ್ರಯೋಗಕ್ಕೆ ಬಳಸಿಕೊಂಡರು.

ಅವರು ಅನುಸರಿಸಿದ ಶಿಕ್ಷಣ ಕ್ರಮವು ನವೀನವಾದದ್ದೂ ಅನುಭವಪೂರ್ಣವಾದದ್ದೂ ಇತ್ತು. ಆಶ್ರಮದ ಸುಮಾರು ಮೂವತ್ತು ಜನ ಮಕ್ಕಳಿಗೆ ಅವರವರ ಮಾತೃಭಾಷೆಯಾದ

ಗುಜರಾತಿ, ಹಿಂದಿ, ತಮಿಳುಗಳಲ್ಲಿ ಶಿಕ್ಷಣ ಕೊಟ್ಟರು. ಅವರು ಅನುಸರಿಸಿದ ಕ್ರಾಂತಿಕಾರೀ ವಿಧಾನವು ಚಟುವಟಿಕೆಯಿಂದೊಡಗೂಡಿತ್ತು. ಕೃಷಿ, ತೋಟಗಾರಿಕೆ, ಚರ್ಮದ ಕೆಲಸ, ಬಡಿಗತನ ಮುಂತಾದ ಕೈಕೆಲಸಗಳ ಮುಖಾಂತರ ಓದುಬರಹ, ಇತಿಹಾಸ ಭೂಗೋಲ, ನಾಗರಿಕಶಾಸ್ತ್ರ, ಸಮಾಜಶಾಸ್ತ್ರ ಮುಂತಾದ ವಿಷಯಗಳನ್ನು ಕಲಿಸುತ್ತಿದ್ದರು. ವಿದ್ಯಾರ್ಥಿಗಳೊಂದಿಗೆ ಶಿಕ್ಷಕರು ಬೆರೆತು, ಅವರ ಚಟುವಟಿಕೆಗಳನ್ನು ನಿರೀಕ್ಷಿಸುತ್ತಿದ್ದರಲ್ಲದೆ, ಪ್ರತ್ಯಕ್ಷ ಮಾರ್ಗದರ್ಶನಗೈಯುತ್ತಿದ್ದರು. ಸತ್ಯ–ಅಹಿಂಸೆಗಳು ಅವರ ಶಿಕ್ಷಣದ ಮೂಲಭೂತ ಅಂಗಗಳಾಗಿದ್ದವು. ಶಾರೀರಿಕ ಶ್ರಮ, ಕುಶಲ ಕೈಕೆಲಸ, ಸ್ವತಂತ್ರ ಚಿಂತನೆಗಳಿಂದ ಶಿಕ್ಷಣದಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತಿದ್ದರು. ಶಿಕ್ಷಕರ ಸಂಯಮಪೂರ್ಣ ಜೀವನವು ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ಅಳವಡಿಸಿಕೊಳ್ಳಲು ನೆರವಾಯಿತು. ನಾಗರಿಕ ಪ್ರಜ್ಞೆಯನ್ನು ಪ್ರತ್ಯಕ್ಷ ಸಮಾಜ ಸೇವಾ ಕಾರ್ಯಗಳಿಂದ ಹುಟ್ಟಿಸುತ್ತಿದ್ದರು. ಶಿಕ್ಷೆಯೆನ್ನುವದು ಗಾಂಧೀಜಿಯವರ ಶಿಕ್ಷಣಕ್ರಮದಲ್ಲಿ ಸ್ಥಾನಪಡೆದಿದ್ದಿಲ್ಲ. ಮನಃ ಪರಿವರ್ತನೆಯು, ಗಾಂಧೀಜಿಯವರು ಉಪಯೋಗಿಸಿದ ಮಹಾ ಶಸ್ತ್ರ. ವಿದ್ಯಾರ್ಥಿಗಳು ಕಾರ್ಯನಿರತರಾಗಿ ನೆಗೆಯುತ್ತ ಕುಣಿಯುತ್ತ ಶೈಕ್ಷಣಿಕ ಚಟುವಟಿಕೆಗಳಲ್ಲಿ ನಿರತರಾಗಿರುತ್ತಿದ್ದರು. ಅವರ ಈ ಸ್ವಾನುಭವದ ಶೈಕ್ಷಣಿಕ ರೀತಿಯು ಅವರನ್ನು ಇನ್ನೂ ಹೆಚ್ಚಾಗಿ ವಿಚಾರಪರರನ್ನಾಗಿ ಮಾಡಿತು.

೧೯೧೫ರಲ್ಲಿ ಭಾರತಕ್ಕೆ ಮರಳಿದ ಮೇಲೆ ಸಾಬರಮತಿ ಆಶ್ರಮ ಕಟ್ಟಿಕೊಂಡು ಭಾರತದ ರಾಜಕೀಯ ಚಿಂತನೆಯೊಂದಿಗೆ ಈ ಶೈಕ್ಷಣಿಕ ಪ್ರಯೋಗವನ್ನೂ ಮುಂದುವರಿಸಿದರು. ೧೯೩೭ರಲ್ಲಿ ತಮ್ಮ ಹರಿಜನ ಪತ್ರಿಕೆಯಲ್ಲಿ ಮೂಲಶಿಕ್ಷಣದ ವಿಷಯವಾಗಿ ಬರೆದು ಶೈಕ್ಷಣಿಕ ತಜ್ಞರ ಗಮನವನ್ನು ಸೆಳೆದರು. ವರ್ಧಾದ ನವಭಾರತ ವಿದ್ಯಾಲಯದ ವ್ಯವಸ್ಥಾಪಕರು ಗಾಂಧೀಜಿಯ ನೆರವಿಗೆ ಬಂದು ೧೯೩೭ ಅಕ್ಟೋಬರ ೨೨ ಮತ್ತು ೨೩ ಈ ಎರಡು ದಿನ ವರ್ಧಾದಲ್ಲಿ ಒಂದು ಶೈಕ್ಷಣಿಕ ಸಮ್ಮೇಲನ ಕರೆದರು. ಗಾಂಧೀಜಿಯವರು ಅಧ್ಯಕ್ಷ ಸ್ಥಾನದಿಂದ ತಮ್ಮ ಹೊಸ ಶಿಕ್ಷಣ ಕ್ರಮವನ್ನು ವಿವರಿಸಿದರು. ಆಗ ಉಪಸ್ಥಿತರಿದ್ದ ಡಾ॥ ಝಕೀರ ಹುಸೇನ, ಪ್ರೊ॥ ಕೆ. ಟಿ. ಶಹಾ, ಆಚಾರ್ಯ ವಿನೋಬಾ ಭಾವೆ, ಕಾಕಾ ಕಾಲೇಕರ, ಮಹದೇವ ದೇಸಾಯಿ, ಮುಂತಾದ ವಿದ್ವಾಂಸರು ಚರ್ಚೆಯಲ್ಲಿ ಭಾಗವಹಿಸಿದ್ದರು. ಸಮ್ಮೇಲನದಲ್ಲಿ ಕೆಳಗಿನ ಮಹತ್ವದ ನಿರ್ಣಯಗಳನ್ನು ಪಾಸು ಮಾಡಲಾಯಿತು.

೨) ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಿರಬೇಕು.

೩) ಪ್ರಾಥಮಿಕ ಹಂತದ ಏಳು ವರುಷಗಳವರೆಗೆ ಯಾವದಾದರೊಂದು ಅನುಕೂಲ ಕೈಕೆಲಸದ ಮುಖಾಂತರ ವಿದ್ಯಾರ್ಥಿಗಳ ಸುಪ್ತಶಕ್ತಿಗಳನ್ನು ಚೇತರಿಸಿ ಶಿಕ್ಷಣ ಕೊಡಬೇಕು.

೪) ಗಾಂಧೀಜಿಯವರ ಈ ಕ್ರಿಯಾತ್ಮಕ ಶಿಕ್ಷಣದಿಂದ ಕಾಲಾಂತರದಲ್ಲಿ ಶಿಕ್ಷಕರ ವೇತನವನ್ನು ಸಹಜವಾಗಿ ಪೂರೈಸಬಹುದು.

ಆಮೇಲೆ ಡಾ॥ ಝಾಕೀರ ಹುಸೇನರ ನೇತೃತ್ವದಲ್ಲಿ ಒಂದು ವ್ಯವಸ್ಥಿತವಾದ ಅಭ್ಯಾಸ ಕ್ರಮವನ್ನು ರಚಿಸಲು ತಜ್ಞ ಸಮಿತಿಯು ನೇಮಿತವಾಯಿತು, ೧೯೩೭ ಡಿಸೆಂಬರ ೨ ರಂದು ಈ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿತು. ಅಂದಿನಿಂದ ಗಾಂಧೀಜಿಯವರ ಈ ಮೂಲಶಿಕ್ಷಣವು ವರ್ಧಾ ಶಿಕ್ಷಣವೆಂದು ಹೆಸರು ಪಡೆಯಿತು.

ವರ್ಧಾ ಶಿಕ್ಷಣದ ಮೂಲಭೂತ ಕಲ್ಪನೆಗಳು :

(೧) ಪುಕ್ಕಟೆ ಒತ್ತಾಯದ ಶಿಕ್ಷಣ : ಏಳರಿಂದ ಹದಿನಾಲ್ಕು ವಯಸ್ಸಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಒತ್ತಾಯದ ಪುಕ್ಕಟೆ ಶಿಕ್ಷಣ ಒದಗಿಸಬೇಕು. ಭಾರತೀಯರ ಹಿತಾಸಕ್ತಿಗನುಗುಣವಾಗಿ ಶಿಕ್ಷಣದ ಯೋಜನೆಯಿರಬೇಕು. ಮತ್ತು ಅದು ಅತ್ಯಂತ ವ್ಯಾವಹಾರಿಕವಾಗಿ. ಅಲ್ಪ ಸಮಯದಲ್ಲಿ. ಸಾರ್ವತ್ರಿಕ ಶಿಕ್ಷಣದ ಧ್ಯೇಯವನ್ನು ಪೂರ್ತಿಗೊಳಿಸಬೇಕು. ಗಾಂಧೀಜಿಯವರಿಗೆ ಒತ್ತಾಯದ ಶಿಕ್ಷಣದ ಮುಖಾಂತರ ಭಾರತೀಯರೆಲ್ಲರಿಗೆ ಒಂದು ನಿರ್ದಿಷ್ಟ ಮಟ್ಟದ ಶಿಕ್ಷಣ ಕೊಡುವ ಅಭಿಲಾಷೆಯಿತ್ತು. ಅದು ಅವರ ಈ ಮೂಲ ಶಿಕ್ಷಣದಿಂದ ಸಾಧ್ಯವಾದೀತೆಂಬ ಭರವಸೆ ಇಟ್ಟುಕೊಂಡಿದ್ದರು.

(೨) ಕೈಕೆಲಸದ ಮುಖಾಂತರ ಶಿಕ್ಷಣ : ಶಿಕ್ಷಣವು ಸುಸಂಬದ್ಧವೂ. ಸ್ವಯಂಪೂರ್ಣ. ಕ್ರಿಯಾತ್ಮಕವೂ. ಉತ್ಪಾದಕವಾದದ್ದೂ ಆಗಿರಬೇಕಾದರೆ ಅದು ಯಾವುದಾದರೊಂದು ಕೈಕೆಲಸದ ಮುಖಾಂತರ ಕೊಡಲ್ಪಡಬೇಕು. ವಿದ್ಯಾರ್ಥಿಗಳ ಚೈತನ್ಯವು ಕ್ರಿಯಾತ್ಮಕವಾಗಿ ಬಳಸಲ್ಪಡುವದರಿಂದ ಅವರಿಗೆ

ಬೇಸರ ಬರಲಾರದು. ಈಗ ಶಾರೀರಿಕ ಶ್ರಮದ ವಿಷಯವಾಗಿ ಹುಟ್ಟಿಕೊಂಡ ತಿರಸ್ಕಾರ ಭಾವನೆಯು ತಾನಾಗಿಯೇ ಇಲ್ಲದಂತಾಗುವದು. ಈ ಶಿಕ್ಷಣದ ವಿಧಾನವನ್ನು ಚುರುಕಾಗಿ ಬುದ್ಧಿವಂತಿಕೆಯಿಂದ ಪ್ರಯೋಗಿಸಿದರೆ ಅದು ಆರ್ಥಿಕವಾಗಿ ಲಾಭದಾಯಕವೂ ಆಗಬಲ್ಲುದು. ಕೈಕೆಲಸದ ಮುಖಾಂತರ ಕೊಡುವ ಜ್ಞಾನವು ಜೀವನಕ್ಕೆ ಹೊಂದಿಕೊಂಡಿರುವಂಥದೂ ವ್ಯಾವಹಾರಿಕವೂ ಆಗಿರುವದರಿಂದ ಅದು ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತವಾಗಿರುವದು.

(೩) ಶೈಕ್ಷಣಿಕ ಖರ್ಚನ್ನು ಪೂರೈಸುವಿಕೆ: ಭಾರತದಾದ್ಯಂತ ಒತ್ತಾಯದ ಪ್ರಕ್ಕಟಿ ಶಿಕ್ಷಣ ಪ್ರಾರಂಭಿಸುವದು ಆರ್ಥಿಕವಾಗಿ ಕಷ್ಟಸಾಧ್ಯವಾಗಿರುವದರಿಂದ ಅವರ ಈ ಶಿಕ್ಷಣ ಕ್ರಮವು ಕೆಲಮಟ್ಟಿಗೆ ಆರ್ಥಿಕ ನೆರವು ನೀಡುವಂಥದಿರುತ್ತದೆ. ವಿದ್ಯಾರ್ಥಿಗಳಿಂದ ಉತ್ಪಾದಿತವಾದ ಮಾಲನ್ನು ಸರಕಾರವೇ ತೆಗೆದುಕೊಂಡು ಮಾರಾಟದ ಯೋಜನೆ ಮಾಡಬೇಕು. ಇದು ಶೈಕ್ಷಣಿಕ ಖರ್ಚನ್ನು ಪೂರೈಸುವದಲ್ಲದೆ, ವಿದ್ಯಾರ್ಥಿಗಳನ್ನು ಶಿಕ್ಷಣಾನಂತರ ಉದ್ಯೋಗಿಗಳನ್ನಾಗಿಯೂ ಮಾಡಬಲ್ಲುದು.

(೪) ಮಾತೃಭಾಷೆಯೇ ಶಿಕ್ಷಣದ ಮಾಧ್ಯಮ: ಮಾತೃಭಾಷೆಯೇ ಪ್ರತಿಯೊಂದು ಶೈಕ್ಷಣಿಕ ಹಂತದ ಮಾಧ್ಯಮವಾಗಿರಬೇಕು. ಮಾತೃಭಾಷೆಯಲ್ಲಿ ಕೊಡಮಾಡುವ ಜ್ಞಾನವು ಸ್ವಾಭಾವಿಕವೂ, ತಿಳುವಳಿಕೆಯುಳ್ಳದ್ದೂ ಆಗಿರುವದರಿಂದ ವಿದ್ಯಾರ್ಥಿಗಳ ಭಾವನಾತ್ಮಕ ಶಕ್ತಿಯನ್ನು ಸದುಪಯೋಗಪಡಿಸಿಕೊಳ್ಳಬಹುದು. ವ್ಯಕ್ತಿಯ ಸರ್ವಾಂಗೀಣ ಉನ್ನತಿಗೆ ಅದು ಅತ್ಯಂತ ಸಹಾಯಕ

ವಾಗುವದು. ಭಾಷೆ–ಸಾಹಿತ್ಯ–ಸಂಸ್ಕೃತಿಗಳು ಒಂದಕ್ಕೊಂದು ಪೂರಕವಾಗಿರುವದರಿಂದ ವಿದ್ಯಾರ್ಥಿಗಳು ಒಳ್ಳೇ ನಾಗರಿಕರಾಗ ಬಹುದು.

(೫) ನಾಗರಿಕ ಜ್ಞಾನ ಪ್ರಾಪ್ತಿ: ಮೂಲಶಿಕ್ಷಣದ ಮುಖ್ಯ ಗುರಿಯು ವಿದ್ಯಾರ್ಥಿಗಳಲ್ಲಿ ನಾಗರಿಕ ಪ್ರಜ್ಞೆ. ಸ್ವಸಾಮರ್ಥ್ಯದ ಅರಿವು, ದೈಹಿಕ ಶ್ರಮದ ಗೌರವ. ಕಾರ್ಯ ವಿಚಕ್ಷತೆ ಮುಂತಾದ ಸದ್ಗುಣಗಳನ್ನು ಉಂಟು ಮಾಡುವದಿರುತ್ತದೆ. ಎಳೆಯ ವಯಸ್ಸಿನಲ್ಲಿ ಸಾಮೂಹಿಕ ಜೀವನದ ಅರಿವಾದರೆ, ಸಮಾಜ ಸೇವೆಯ ಭಾವ ಮನಸ್ಸಿನಲ್ಲಿ ಬೇರೂರಿ ಅವರು ಒಳ್ಳೇ ನಾಗರಿಕರಾಗುವರೆಂಬಲ್ಲಿ ಸಂಶಯವಿಲ್ಲ.

೧೯೩೫ರ ಕಾಯದೆಯಂತೆ ಪ್ರಾಂತಿಕ ಸ್ವಾಯತ್ತತೆಯು ದಯಪಾಲಿಸಲ್ಪಟ್ಟಿತು. ಪ್ರಾಂತೀಯ ಶಾಸನ ಸಭೆಗಳಲ್ಲಿ ಕಾಂಗ್ರೆಸ್ಸು ಬಹುಮತ ಪಡೆದು ಶಾಸನಾಧಿಕಾರ ಪಡೆಯಿತು. ೧೯೩೮ರಲ್ಲಿ ಶ್ರೀ ಬಿ. ಜಿ. ಖೇರ ಅವರ ಹಿರಿಯತನದಲ್ಲಿ ಒಂದು ಸಮಿತಿಯು. ಗಾಂಧೀಜಿಯವರ ಶಿಕ್ಷಣ ಕ್ರಮವನ್ನು ಪರಿಶೀಲಿಸಲು ಕೇಂದ್ರ ಶಿಕ್ಷಣ ಸಲಹಾಮಂಡಳಿಯಿಂದ ನೇಮಕವಾಯಿತು. ಖೇರ ಸಮಿತಿಯು ತನ್ನ ಶಿಫಾರಸುಗಳೊಂದಿಗೆ ವರದಿಯನ್ನು ಒಪ್ಪಿಸಿತು. ಕೇಂದ್ರ ಸರಕಾರವು ಈ ವರದಿಯನ್ನಾಯ ಪ್ರಾಂತಿಕ ಸರಕಾರಗಳಿಗೆ ಸ್ಥಳೀಯ ಮೊದಮಾರ್ಪೆಯೊಂದಿಗೆ ಈ ಶಿಕ್ಷಣ ಕ್ರಮವನ್ನು ಪ್ರಯೋಗಿಸಲು ಆದೇಶವಿತ್ತಿತು. ಅಂದಿನಿಂದ ಈ ವರ್ಧಾ ಶಿಕ್ಷಣವು ಬಳಕೆಯಲ್ಲಿದೆ.

ಪ್ರಥಮವಾಗಿ. ಪ್ರಾಥಮಿಕ ಹಂತದಲ್ಲಿ ಇದನ್ನು ಪ್ರಾರಂಭಿಸುವ ಯೋಜನೆಯಿದ್ದರೂ. ಇದನ್ನೇ ಮಾಧ್ಯಮಿಕ ಹಾಗು ವಿಶ್ವವಿದ್ಯಾಲಯ ಮಟ್ಟದವರೆಗೂ ಹಮ್ಮಿಕೊಳ್ಳಬಹುದೆಂಬ ಪ್ರಯತ್ನವೂ ನಡೆಯಿತು. ಆದರೆ ಪ್ರಯೋಗಾನಂತರ ಅದನ್ನು ಮಾಧ್ಯಮಿಕ ಹಾಗು ಉಚ್ಚಶಿಕ್ಷಣಕ್ಕೆ ಅಳವಡಿಸಿಕೊಳ್ಳುವುದು ಅಸಾಧ್ಯವೆಂದು ಬಿಟ್ಟು ಬಿಡಬೇಕಾಯಿತು.

ಯೋಗ್ಯ ಶಿಕ್ಷಕರ ಕೊರತೆ, ಅಧಿಕಾರಿಗಳ ಅಲಕ್ಷ್ಯತನ, ಸರಕಾರದ ನಿಷ್ಕ್ರಿಯತೆ ಇವುಗಳಿಂದ ಗಾಂಧೀಜಿಯವರು ಅಪೇಕ್ಷಿಸಿದ ಪ್ರಗತಿಯು ಕಂಡು ಬರಲಿಲ್ಲ. ದೋಷಪೂರ್ಣ ವಿಧಾನದಿಂದ ಚಟುವಟಿಕೆಯ ಮೂಲಕ ಶಿಕ್ಷಣ ಕೊಡಬೇಕೆಂಬ ಪ್ರಯತ್ನವು ಕೇವಲ ಕೈಕೆಲಸ ಕುಶಲತೆಯನ್ನು ಕೊಡುವದರಲ್ಲಿ ಯಶಸ್ವಿಯಾಯಿತು. ಭಾರತದ ಮಕ್ಕಳನ್ನೆಲ್ಲ ಕೈಕಸಬುದಾರರನ್ನೇ ಮಾಡಬೇಕಾಗಿಲ್ಲವೆಂಬ ವಿರೋಧಿ ಅಭಿಪ್ರಾಯವು ಹುಟ್ಟಿಕೊಂಡಿದೆ. ಹೀಗಾಗಿ ವರ್ಧಾ ಶಿಕ್ಷಣವು ಪ್ರಯೋಗಾವಸ್ಥೆಯಲ್ಲಿಯೇ ಅಯಶಸ್ವಿಯಾದಂತಾಗಿದೆ.

ಯೋಜನಾ ಆಯೋಗವು ತನ್ನ ತೃತೀಯ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿ ಹೀಗೆ ಅಭಿಪ್ರಾಯಪಟ್ಟಿದೆ:—
"Progress towards Basic Education will largely depend on the steps taken to remove the short comings of existing Basic Institution. This calls for much effort in ensuring adequate training, improvement in teaching methods, efficient

inspection, provision of suitable literature and conscious efforts to link the activities of Basic Schools with those of the local community in the field of agriculture, village industries, community development, social education etc."

---

೪. ವಿಶ್ವ ಭಾರತಿ

"I had all along experienced the want of an institution in India which should be a true centre for all the different Eastern Cultures concentrating in one spot the varied ideals of art and civilization which have been contributed to the world by the various Countries of Asia."

—**Rabindranath Tagore**

ಮಹಾತ್ಮಾ ಗಾಂಧೀಜಿಯವರು ಬ್ರಿಟಿಷ್ ಶಿಕ್ಷಣದಿಂದ ನಿರಾಶರಾದರೆ, ರವೀಂದ್ರನಾಥ ಟಾಗೋರರು ಕಾರಾಗೃಹ ಸಮಾನವಾದ ಶಾಲೆಯ ಜೀವನದಿಂದ ನಿವೃತ್ತಿ ಬಯಸಿದರು. ಅವರು ಶಾಲೆಗೆ ಹೋಗಿ ಕಲಿತದ್ದೇ ಕಡಿಮೆ. ಕವಿಹೃದಯದ ಅವರಿಗೆ ಸ್ವಚ್ಛಂದ ನಿಸರ್ಗವು ಮಹಾಶಾಲೆಯೆನ್ನಿಸಿತು. ಶಾಲೆಯ ಅಭ್ಯಾಸಕ್ರಮ, ಪಠ್ಯಪುಸ್ತಕ, ಶಿಕ್ಷಕರು ಅವರಿಗೆ ಹಿಡಿಸ ಲಿಲ್ಲ. ನಿಸರ್ಗದ ಮಡಿಲಲ್ಲಿ ಅರಳುವ ಪುಷ್ಪ, ಬೀಸುವ ಗಾಳಿ ಉರಿಯುವ ಸೂರ್ಯ, ಮಿನುಗುವ ನಕ್ಷತ್ರ, ಜುಳುಜುಳು,

ಹರಿಯುವ ಪ್ರವಾಹ, ಉಲಿಯುವ ಕೋಗಿಲೆಗಳೇ ಅವರ ಸಂಗಾತಿಗಳಾದರು. ಮನಸ್ಸಿಗೆ ಬಂದಾಗ ಓದಿ, ಮನಬಂದಂತೆ ಅಲೆದು ಕರ್ಣಾನಂದಗೊಳ್ಳುವಂತೆ ಹಾಡಿ ಕುಣಿದಾಡುವದೇ ಅವರ ಅಭ್ಯಾಸವಾಯಿತು. ವಿಶ್ವವಿದ್ಯಾಲಯದ ಯಾವ ಪದವೀಧರನಿಗೂ ಕಡಿಮೆಯಿಲ್ಲದಷ್ಟು ಓದಿ ಸ್ವಂತ ಜೀವನಕ್ಕೆ ಅಣಿಯಾದರು. ಅವರಿಗೆ ತಮ್ಮ ನಾಲ್ವತ್ತನೇ ವಯಸ್ಸಿನ ವರೆಗೆ ತಮ್ಮದೇ ಆದ ಶಿಕ್ಷಣ ಪದ್ಧತಿಯನ್ನು ಪ್ರಾರಂಭಿಸ ಬೇಕೆಂಬ ಇಚ್ಛೆಯೂ ಇರಲಿಲ್ಲ. ಆದರೆ ತಮ್ಮ ಮಕ್ಕಳು ಶಾಲೆಗೆ ಹೋಗುವ ವಯಸ್ಸಿನವರಾದಾಗ, ಅವರಿಗೆ ತಮ್ಮ ಮೊದಲಿನ ಅನುಭವಗಳೆಲ್ಲ ಮರುಕಳಿಸಿ ವಿಚಾರಪರರಾದರು. ತಮ್ಮ ಮಕ್ಕಳು ತಮ್ಮಂತೆಯೇ ಶಾಲಾ ಜೀವನವನ್ನು ದುಃಖಾಂತಗೊಳಿಸಬಾರದೆಂಬ ಉದ್ದೇಶದಿಂದ ಅವರಿಗಾಗಿ ತಮ್ಮ ತಂದೆಯವರ ಆಶ್ರಮವಾದ ಶಾಂತಿನಿಕೇತನದಲ್ಲಿ ೧೯೦೧ರಲ್ಲಿ ಒಂದು ಶಾಲೆಯನ್ನು ತೆರೆದರು. ಆಗ ಅವರ ಮನದಲ್ಲಿ ಪ್ರಾಚೀನ ಭಾರತದ ತಪೋವನದ ಕಲ್ಪನೆಯೇ ಇತ್ತು. ಇಂಥ ತಪೋವನ ದಲ್ಲಿ ಗುರುಶಿಷ್ಯರು, ಜೀವನದ ಜಂಜಾಟದಿಂದ ದೂರವಿದ್ದು ನಿಸರ್ಗದ ಮಡಿಲಲ್ಲಿ ಸತ್ಯಾರ್ಥಿಗಳಾಗಿ ವಾಸಿಸುವದನ್ನು ಕಲ್ಪಿಸಿದ್ದರು.

ಶಾಂತಿನಿಕೇತವು ಒಂದು ಸುಂದರ ಫಲಪುಷ್ಪಭರಿತ ವನವಾಗಿತ್ತು. ಶಾಲೆಯೆಂಬ ಕಲ್ಪನೆ ಬರಬಾರದೆಂಬ ದೃಷ್ಟಿ ಯಿಂದ ವರ್ಗಗಳೆಲ್ಲ ಬಯಲು ಪ್ರದೇಶದಲ್ಲಿ, ತಂಪಾದ ಗಿಡ ಬಳ್ಳಿಗಳ ನೆರಳಲ್ಲಿ ನಡೆಯುತ್ತಿದ್ದವು. ವಿದ್ಯಾರ್ಥಿಗಳು ತಮ್ಮ

ತಮ್ಮ ಚಾಪೆ, ಪಾಟಿ–ಪುಸ್ತಕಗಳನ್ನು ತಂದು ತಮಗೆ ಬೇಕಾದಲ್ಲಿ ಕುಳಿತು ಅಭ್ಯಸಿಸುತ್ತಿದ್ದರು. ಬೆಳಗು ಮುಂಜಾನೆ ಸಂಗೀತದಿಂದ ವರ್ಗಗಳು ಪ್ರಾರಂಭವಾಗಿ, ಸಂಗೀತದಿಂದಲೇ ಮುಗಿಯುತ್ತಿದ್ದವು. ಪ್ರತಿದಿನ ಬೆಳಗಿನಲ್ಲಿ ವಿದ್ಯಾರ್ಥಿಗಳ ತಂಡವೊಂದು ರವೀಂದ್ರರ ರಚನೆಗಳನ್ನು ಸರಾಗವಾಗಿ ಹಾಡುತ್ತ ಆಶ್ರಮ ವಿದ್ಯಾರ್ಥಿಗಳೆಲ್ಲರನ್ನು ಎಚ್ಚರಿಸುತ್ತಿದ್ದಿತು.

ರವೀಂದ್ರರು ವಿದ್ಯಾರ್ಥಿಗಳಿಗೆ ಯಾವ ನಿರ್ಬಂಧಗಳನ್ನೂ ಹೇರುತ್ತಿದ್ದಿಲ್ಲ. ವಿದ್ಯಾರ್ಥಿಗಳ ಮೇಲೆ ಅವರ ವಿಶ್ವಾಸ ಬಹಳ. ವಿದ್ಯಾರ್ಥಿಗಳಾದರೂ ಅವರ ವಿಶ್ವಾಸಕ್ಕೆ ಪಾತ್ರರಾಗುವಂತೆ ನಡೆದುಕೊಳ್ಳುತ್ತಿದ್ದರು. ವಿದ್ಯಾರ್ಥಿಗಳೇ ತಮ್ಮ ತಮ್ಮ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ತಮ್ಮಲ್ಲಿಯೇ ನಿರ್ಣಾಯಕರನ್ನು ಆರಿಸಿಕೊಂಡು ಅವರ ಆದೇಶದಂತೆ ನಡೆದುಕೊಳ್ಳುತ್ತಿದ್ದರು.

ದೈನಂದಿನ ಚಟುವಟಿಕೆಗಳು: ಬೆಳಗು ಮುಂಜಾನೆ ಗಾಯಕ ವಿದ್ಯಾರ್ಥಿಗಳಿಂದ ಸಂಕೀರ್ತನೆ— ತಮ್ಮ ತಮ್ಮ ಕೋಣೆಗಳ ಸ್ವಚ್ಛತೆಯನ್ನು ಮುಗಿಸಿ ದೈಹಿಕ–ವ್ಯಾಯಾಮ ಮಾಡುವದು—ಅನಂತರ ಸ್ನಾನ—ಪ್ರಾರ್ಥನೆ—ಆಮೇಲೆ ಅಲ್ಪೋಪಹಾರ—ಸಾಮಾನ್ಯವಾಗಿ ೮ರಿಂದ ೧೧–೩೦ರ ವರೆಗೆ ಅಭ್ಯಾಸ ಹಾಗು ಕೆಲಸ (ಶ್ರಮದಾಯಕ ಕೆಲಸಗಳನ್ನು ಈ ಸಮಯದಲ್ಲಿಯೇ ಪೂರೈಸುವದು)—ಮಧ್ಯಾಹ್ನ ೧೨ಕ್ಕೆ ಊಟ—ಚರ್ಚೆ, ಆಟ. ಉತ್ಪಾದಕ ಚಟುವಟಿಕೆ—ಆಮೇಲೆ ಸ್ನಾನ—

ಅನಂತರ ಕಥೆ, ನಾಟ್ಯ, ಹಾಡು— ರಾತ್ರಿ ೯–೩೦ಕ್ಕೆ ನಿದ್ದೆ. ಇವು ನಿತ್ಯ ಕಾರ್ಯಕ್ರಮಗಳಾಗಿದ್ದವು.

ರವೀಂದ್ರರು ಪಾಶ್ಚಾತ್ಯ ಶಿಕ್ಷಣವೆಲ್ಲವನ್ನೂ ತೆಗಳುತ್ತಿದ್ದಿಲ್ಲ. ಅವರು ಹೆಚ್ಚಾಗಿ ದೇಶೀಯ ಜೀವನದ ಒಳ್ಳೊಳ್ಳೆ ಅಂಶಗಳನ್ನು ಅನುಸರಿಸಿ, ಪಾಶ್ಚಾತ್ಯ ಜೀವನದ ಸುಂದರ ರೀತಿನೀತಿಗಳನ್ನು ಅಂಗೀಕರಿಸುತ್ತಿದ್ದರು. ಸುಂದರವಾದದ್ದು ಎಲ್ಲಿಂದಲೇ ಬರಲಿ ಅದನ್ನು ಮುಕ್ತ ಮನಸ್ಸಿನಿಂದ ಅವರು ಸ್ವಾಗತಿಸುತ್ತಿದ್ದರು.

ಇಪ್ಪತ್ತು ವರುಷಗಳ ಅವಧಿಯಲ್ಲಿ ಶಾಂತಿನಿಕೇತನವು ವಿಶ್ವಭಾರತಿಯಾಗಿ ಬೆಳೆದು ನಿಂತಿತು. ೧೯೧೬ರಲ್ಲಿ ರವೀಂದ್ರರು ಅಮೇರಿಕೆ, ಜಪಾನಗಳಿಗೆ ಭೆಟ್ಟಿಯಿತ್ತುದರ ಪರಿಣಾಮವಾಗಿ ವಿಶ್ವಭಾರತಿ ಕಲ್ಪನೆಯು ಮೂಡಿತು. ಅದು ಪ್ರಥಮ ಮಹಾಯುದ್ಧದ ಕಾಲ. ದೇಶ ದೇಶಗಳ ನಡುವೆ ಈರ್ಷೆ-ಹೋರಾಟ ತಾಂಡವವಾಡುತ್ತಿತ್ತು. ಭಾರತಕ್ಕೆ ಬಂದ ಕೂಡಲೆ ರವೀಂದ್ರರು ಪೂರ್ವ–ಪಶ್ಚಿಮಗಳ ಬುದ್ಧಿವಂತರನ್ನು ಒಂದೆಡೆ ಕೂಡಿಸಿ ಅವರ ಸಂಸ್ಕೃತಿ–ತತ್ವಜ್ಞಾನ–ಕಲೆ–ಸಂಗೀತಗಳ ಮುಖಾಂತರ ಒಳ್ಳೇ ತಿಳುವಳಿಕೆಯನ್ನು ಹುಟ್ಟಿಸುವ ಸಂಸ್ಥೆಯನ್ನು ತೆಗೆಯುವ ಕನಸು ಕಂಡರು. ಅದರ ಪರಿಣಾಮವೇ ವಿಶ್ವಭಾರತಿ. ಜಗತ್ತಿನ ವಿದ್ವಾಂಸರನ್ನೆಲ್ಲ ಬರಮಾಡಿಕೊಂಡು ವಿಶ್ವಭಾರತಿಯಲ್ಲಿ ಚರ್ಚಾ ಗೋಷ್ಠಿಯನ್ನು ನಡೆಯಿಸುತ್ತಿದರು. ಬಂದ ಅತಿಥಿಗಳು ಭಾರತೀಯ ಸಂಸ್ಕೃತಿ–ಸಾಹಿತ್ಯ–ಜನಜೀವನದ ಪರಿಚಯ ಮಾಡಿಕೊಳ್ಳುತ್ತಿದ್ದರು.

ರವೀಂದ್ರರ ಕಲ್ಪನೆಯಂತೆ ವಿಶ್ವಭಾರತಿಯು ಮೂರು ವರ್ತುಳಗಳಿಂದ ಕೂಡಿದ್ದಾಗಿದೆ. ಮಧ್ಯವರ್ತುಳವು ಭಾರತೀಯ ಸಂಗೀತ–ಕಲೆ–ಸಾಹಿತ್ಯ–ಸಭ್ಯತೆಯನ್ನು ತೋರಿಸುತ್ತದೆ. ಅದನ್ನು ಸುತ್ತಿದ ಮತ್ತೊಂದು ವರ್ತುಳವು ಏಶಿಯಾದ ವಿವಿಧ ಸಂಸ್ಕೃತಿ, ಸಾಹಿತ್ಯ, ಜನಾಂಗಗಳನ್ನು ಪ್ರತಿನಿಧೀಕರಿಸುತ್ತದೆ. ಮೂರನೆಯ ಮಹಾ ವರ್ತುಳವು ಜಗತ್ತಿನ ಸಂಸ್ಕೃತಿಯೆಲ್ಲವನ್ನು ಪ್ರತಿನಿಧೀಕರಿಸುತ್ತದೆ. ರವೀಂದ್ರರ ದೃಷ್ಟಿಯಲ್ಲಿ ವಿಶ್ವಭಾರತಿಯು ಜಾಗತಿಕ ವಿಶ್ವವಿದ್ಯಾಲಯವಾಗಿ ಬೆಳೆಯಬೇಕಾಗಿತ್ತು.

ವಿಶ್ವಭಾರತಿಯ ಅಂಗ ಸಂಸ್ಥೆಗಳು :

(೧) ಪಾಠ ಭವನ— ಶಾಲಾ ವಿಭಾಗ
(೨) ಶಿಕ್ಷಾ ಭವನ— ಮಾಧ್ಯಮಿಕ ವಿಭಾಗ
(೩) ವಿದ್ಯಾ ಭವನ— ಮಹಾವಿದ್ಯಾಲಯ ವಿಭಾಗ
(೪) ವಿನಯ ಭವನ— ಶೈಕ್ಷಣಿಕ ವಿದ್ಯಾಲಯ
(೫) ಕಲಾ ಭವನ— ಲಲಿತಕಲೆ ಮತ್ತು ಕೈಗಾರಿಕಾ ವಿಭಾಗ
(೬) ಸಂಗೀತ ಭವನ— ಸಂಗೀತ–ನೃತ್ಯ ವಿದ್ಯಾಲಯ

ಈ ಆರು ವಿಭಾಗಗಳನ್ನಲ್ಲದೇ ಸ್ನಾತಕರಿಗಾಗಿ ಕೆಳಗಿನ ಸಂಶೋಧನಾ ವಿಭಾಗಗಳನ್ನು ನಡೆಯಿಸಲಾಗುತ್ತದೆ.

(೧) ಚೀನಾ ಭವನ
(೨) ಭಾರತ–ತಿಬೇಟ್ ಭವನ
(೩) ಹಿಂದೀ ಭವನ

ಮೇಲಿನ ಶೈಕ್ಷಣಿಕ ಭವನಗಳನ್ನಲ್ಲದೆ, ವಿಶ್ವಭಾರತಿಯು ಶ್ರೀನಿಕೇತನವೆಂಬಲ್ಲಿ ಗ್ರಾಮಾಭ್ಯುದಯ ಕೇಂದ್ರವನ್ನೂ ನಡೆಯಿ ಸುತ್ತದೆ. ಮುಖ್ಯವಾಗಿ ಶ್ರೀನಿಕೇತನವು ಹಳ್ಳಿಗರ ಸಾಮಾಜಿಕ ಹಾಗು ಆರ್ಥಿಕ ಜೀವನವನ್ನು ಸಾದ್ಯಂತವಾಗಿ ಅಭ್ಯಸಿಸುವ ಸಂಸ್ಥೆ ಯಾಗಿದೆ. ಇತ್ತೀತ್ತಲಾಗಿ ಪ್ರಾಥಮಿಕ ಹಂತದಿಂದ ಕಾಲೇಜ ಹಂತದವರೆಗೆ ಹಳ್ಳಿಗರ ಶಿಕ್ಷಣಾಭ್ಯಾಸ ವಿಭಾಗವನ್ನು ತೆರೆಯ ಲಾಗಿದೆ. ಶ್ರೀನಿಕೇತನದಲ್ಲಿ ಕೇವಲ ಹಳ್ಳಿಗರಿಗಾಗಿ ಒಂದು ಮಾಧ್ಯಮಿಕ ಶಾಲೆಯನ್ನೂ ನಡೆಯಿಸಲಾಗುತ್ತದೆ. ಅದರ ಹೆಸರು ಶಿಕ್ಷಾಸತ್ರ. ಹಾಗೆಯೇ ಗ್ರಾಮೋದ್ಯೋಗ ಶಿಕ್ಷಣ ಕೇಂದ್ರವು ನಡೆಯಿಸಲ್ಪಡುತ್ತದೆ. ಗ್ರಾಮೋದ್ಯೋಗ ಶಿಕ್ಷಣ ಪಡೆದವರಿಗೆ ಡಿಪ್ಲೋಮಾ ಪದವಿಗಳನ್ನು ಕೊಡಲಾಗುತ್ತದೆ.

ರವೀಂದ್ರನಾಥರು ಕವಿಗಳು, ಭಾರತ ಸಂಸ್ಕೃತಿಯ ಪ್ರತಿ ನಿಧಿಗಳು. ಅವರಿಗೆ ಭಾರತವು ಪಾಶ್ಚಾತ್ಯ ಮಾದರಿಯಲ್ಲಿ ಬೆಳೆದು ಕಲಹ–ಕೋಲಾಹಲಗಳ ಕ್ಷೇತ್ರವಾಗಬೇಕಾಗಿದ್ದಿಲ್ಲ. ಶಾಂತಿ ಸಮಾಧಾನಗಳ ಬೀಡಾಗಿ ಸಂಸ್ಕೃತಿಯ ಪರಿಮಳವನ್ನು ಬೀರ ಬೇಕಾಗಿತ್ತು. ಹಾಗೆಯೇ ವಿಜ್ಞಾನ–ತಾಂತ್ರಿಕ ಜ್ಞಾನಗಳನ್ನು ಅವರು ಕಡೆಗಣಿಸಲಿಲ್ಲ. ಅದನ್ನು ಪೂರೈಸುವ ಶಾಲೆ–ಕಾಲೇಜು ಗಳು ಭಾರತದ ತುಂಬೆಲ್ಲ ಹಬ್ಬಿದವು. ಅದನ್ನೇ ಇವರೂ ಕೈಕೊಂಡು ಮಾನವತೆ ಎದುರಿಸುತ್ತಿರುವ ಸಾಂಸ್ಕೃತಿಕ ತಪ್ಪು ತಿಳುವಳಿಕೆಯನ್ನು ಸಹಿಸುವದಾಗಲಿಲ್ಲ. ಪೂರ್ವ ಪಶ್ಚಿಮ ದೇಶ ಗಳಲ್ಲಿ ಬೆಳೆದು ಬಂದ ಅಪನಂಬಿಕೆಯನ್ನು ತೆಗೆದು ಹಾಕಿ ಸಮಗ್ರ ಮಾನವತೆಯೆಲ್ಲಾ ಒಂದು ಎಂಬ ಮಾನವೀಯ ವಿಶ್ವಾಸವನ್ನು ಹುಟ್ಟಿಸಬೇಕಾಗಿತ್ತು. ರವೀಂದ್ರರ ವಿಶ್ವಭಾರತಿಯು ಆ ದಿಶೆ ಯಲ್ಲಿ ನಡೆದ ಒಂದು ಮಹತ್ತರವಾದ ಶೈಕ್ಷಣಿಕ ಪ್ರಯೋಗ.

೫. ಸ್ವತಂತ್ರ ಭಾರತದಲ್ಲಿ ಶಿಕ್ಷಣ

"Tinkering with the existing situation and moving forward with faltering steps and lack of faith can make things worse than before"

–Kothari Commission

೧೯೪೭ ಆಗಸ್ಟ ೧೫ರಂದು ಭಾರತವು ಸ್ವತಂತ್ರವಾಯಿತು. ಹಾಗೆಯೇ ತನ್ನ ರಾಷ್ಟ್ರೀಯ ಜೀವನವನ್ನು ರೂಪಿಸಿಕೊಳ್ಳುವ ಅವಕಾಶವನ್ನು ಪಡೆಯಿತು.

ರಾಷ್ಟ್ರೀಯ ಜೀವನದ ಸ್ಥಿತಿಗತಿಗಳನ್ನು ಕೂಲಂಕಷವಾಗಿ ಅಭ್ಯಸಿಸಿ ಬ್ರಿಟಿಷ್ ರಾಜಸತ್ತೆಯಿಂದ ಪರಿಣಾಮಗೊಂಡ ಎಷ್ಟೋ ಅ-ಭಾರತೀಯ ಅಂಶಗಳನ್ನು ಕಿತ್ತೊಗೆದು ಭಾರತೀಯ ಜೀವನಕ್ಕೆ ಪೋಷಕವಾಗಬಲ್ಲ ವಿವಿಧ ಯೋಜನೆ. ಪುನರ್ನಿರ್ಮಾಣಗಳನ್ನು ಕೈಕೊಳ್ಳುವದಿತ್ತು. ಆರ್ಥಿಕ ಅಭಿವೃದ್ಧಿಯೊಂದಿಗೆ ಶೈಕ್ಷಣಿಕ ಗೊತ್ತುಗುರಿಗಳನ್ನು ನಿರ್ಧರಿಸಿ ಭಾರತಾದ್ಯಂತ ರಾಷ್ಟ್ರೀಯ ಶಿಕ್ಷಣದ ಯೋಜನೆಯನ್ನು ಹಮ್ಮಿಕೊಳ್ಳುವದಿತ್ತು. ಬ್ರಿಟಿಷ್ ಶಿಕ್ಷಣ ಪದ್ಧತಿಯಿಂದ ಉಂಟಾದ ಸಾಂಸ್ಕೃತಿಕ ಜೀವನದ

ವಿಪರ್ಯಾಸವನ್ನು ದೂರೀಕರಿಸಿ ಭಾರತೀಯ ಜೀವನದ ಮೂಲ ಭೂತ ಮೌಲ್ಯಗಳನ್ನು ಪುನರಪಿ ಕಾರ್ಯರೂಪದಲ್ಲಿ ತಂದು, ಭಾರತೀಯರು ಭಾರತೀಯರೇ ಆಗಿ ಮುಂದುವರಿಯುವ ಎತ್ತುಗಡೆಯನ್ನು ಮಾಡುವದಿತ್ತು. ರಾಜಕೀಯ ಸ್ವಾತಂತ್ರ್ಯ ದೊಂದಿಗೆ ಪ್ರವೇಶ ಪಡೆದ ಪ್ರಜಾಸತ್ತಾತ್ಮಕ ವಿಚಾರ, ಪ್ರಜೆಗಳ ಹೊಣೆಗಾರಿಕೆ, ಪ್ರಜೆಗಳಲ್ಲಿರಬೇಕಾದ ಅನ್ಯೋನ್ಯತೆ. ಹಳ್ಳಿಗರ ಆರ್ಥಿಕ ಪುನರ್ರಚನೆ, ಆಧುನಿಕ ಜೀವನದ ಸೌಲಭ್ಯಗಳ ಪರಿ ಜ್ಞಾನ, ನಾಗರಿಕ ಜೀವನದ ನಿರ್ವಹಣೆಗಾಗಿ ಬೇಕಾದ ಅವರ ಹಕ್ಕು ಬಾಧ್ಯತೆಗಳ ಅರಿವು, ಸಮಾಜವಾದೀ ಸಮಾಜ ರಚನೆಯ ಹೊಳಪು, ಸಮಾಜದಲ್ಲಿ ನೆಲೆಸಬೇಕಾದ ಸರಿಸಮಾನತೆಯ ವಾಸ್ತ ವಿಕ ತಿಳುವಳಿಕೆ ಇವೆಲ್ಲವುಗಳನ್ನು ತಾಳ್ಮೆಯಿಂದ ಪರಿಶೀಲಿಸಲು ಬೇಕಾದ ವ್ಯಕ್ತಿಗತ ತಾರತಮ್ಯಜ್ಞಾನ. ಅವನ್ನೂ ಪೋಷಿಸಿ ಸಂವರ್ಧಿಸಬಲ್ಲ ಶಾಸ್ತ್ರೀಯ ಶಿಕ್ಷಣ ಇವೇ ಮುಂತಾದ ವಿಷಯ ಗಳನ್ನು ನಿರ್ಧರಿಸುವದಿತ್ತು. ಇವೆಲ್ಲಕ್ಕೂ ಮೂಲವಾದ ರಾಷ್ಟ್ರೀಯ ಶಿಕ್ಷಣದ ರೂಪರೇಷೆಯನ್ನು ಗುರುತಿಸಿ ಆ ದಿಶೆಯಲ್ಲಿ ಭಾರತೀಯ ಮಕ್ಕಳಿಗೆ ಶಿಕ್ಷಣವನ್ನೊದಗಿಸುವದಿತ್ತು.

ಆದರೆ ಸ್ವತಂತ್ರ ಭಾರತಕ್ಕೆ ಸ್ವಾತಂತ್ರ್ಯದೊಂದಿಗೆ ಎದು ರಾದ ಭಾರತ ವಿಭಜನೆಯ ಅನಿಷ್ಟ ಪರಿಣಾಮ. ಕಾಶ್ಮೀರದ ಮೇಲೆ ಪಾಕಿಸ್ತಾನದ ದಾಳಿ, ಪಾಕಿಸ್ತಾನದಿಂದ ಹೊರದೂಡ ಲ್ಪಟ್ಟ ನಿರಾಶ್ರಿತರ ಪುನರ್ವ್ಯವಸ್ಥೆ. ಅಂತರರಾಷ್ಟ್ರೀಯ ರಂಗ ದಲ್ಲಿ ಭಾರತದ ಪ್ರವೇಶ ಇವೇ ಮುಂತಾದ ಗಹನ ಸಮಸ್ಯೆಗಳು ಭಾರತ ಸರಕಾರಕ್ಕೆ ಎದುರಾದವು. ಆಧುನಿಕ ಆರ್ಥಿಕ ವಾದಗಳ

ಬಿತ್ತಣದ ಮೂಲಕ ಆರ್ಥಿಕ ಪುನರ್‌ರಚನೆಯೇ ಮಹಾ ಸಮಸ್ಯೆ ಯಾಗಿ ಅನ್ನ, ಅರಿವೆ, ಆಶ್ರಯಗಳೇ ನಮ್ಮ ಧುರೀಣರ ಲಕ್ಷ್ಯ ವನ್ನು ಸೆಳೆದವು. ಮೂಲಭೂತ ಸಮಸ್ಯೆಯಾದ 'ಅರಿವು' ಹಿಂದೂಡಲ್ಪಟ್ಟಿತು. ಅಂದರೆ ಮುಖ್ಯವಾಗಿ ಆಗಬೇಕಾದ ರಾಷ್ಟ್ರೀಯ ಶಿಕ್ಷಣ-ಸಂಯೋಜನೆಯು ಕೈಗೆತ್ತಿಕೊಳ್ಳಲ್ಪಡಲಿಲ್ಲ. ಬ್ರಿಟಿಷರಿಂದ ಬಳುವಳಿಯಾಗಿ ಬಂದ ಗಾಂಧೀಜಿ, ಟಾಗೋರ ಮುಂತಾದವರಿಂದ ತಿರಸ್ಕರಿಸಲ್ಪಟ್ಟ, ಭಾರತೀಯರನ್ನು ಸಾಹೇಬ ರನ್ನಾಗಿ ಪರಿವರ್ತಿಸಲು ನೆರವಾದ, ಭಾರತೀಯರಿಗೆ ಅವರ ಸಂಸ್ಕೃತಿ ಸಾಹಿತ್ಯ ತತ್ವಜ್ಞಾನಗಳ ಅರಿವೇ ಆಗಬಾರದೆಂಬ ದುರು ದ್ದೇಶದಿಂದ ಪ್ರಾರಂಭಿಸಲ್ಪಟ್ಟ ಮೆಕಾಲೆ ಪ್ರಣೀತ ಬ್ರಿಟಿಷ್ ಶಿಕ್ಷಣ ವನ್ನೇ ಮುಂದುವರಿಸಲಾಯಿತು.

ಹರಿದ ಅರಿವೆಯನ್ನು ತೇಪೆ ಹಚ್ಚಿದಂತೆ, ಇಲಿ ಹೆಗ್ಗಣ ಗಳಿಂದ ಗೀರಾದ ಹಾಳುಮನೆಯ ಗುದ್ದು ಮುಚ್ಚಿದಂತೆ, ಅಲ್ಲೊಂದು ಇಲ್ಲೊಂದು ಶೈಕ್ಷಣಿಕ ಸುಧಾರಣೆಗಳನ್ನು ಮಾತ್ರ ಕೈಕೊಳ್ಳಲಾಯಿತು. ಕೈಕೊಳ್ಳುವ ಯೋಜನೆಗಳಲ್ಲಿಯೂ ತಾಳ ಮೇಳವಿರಲಿಲ್ಲ. ಹೀಗಾಗಿ ಸಂಯೋಜಿತ ಶೈಕ್ಷಣಿಕ ಪ್ರಗತಿ ಯಾಗದೆ ದೇಶದ ತುಂಬೆಲ್ಲ ಶಾಲೆ ಕಾಲೇಜುಗಳು ಮಾತ್ರ ಬೆಳೆದು ನಿಂತಿವೆ. ಶಿಕ್ಷಣದ ಅಂತಸ್ಸತ್ವವಾದ ಬೋಧಭಾಷೆ ವಾದಗ್ರಸ್ತ ಸಮಸ್ಯೆಯಾಗಿದೆ. ಕ್ಷಿಪ್ರದಲ್ಲಿಯೇ ನಿರ್ಣಯ ತೆಗೆದುಕೊಂಡಿದ್ದರೆ ಇಂದು ಭಾರತ ಸರಕಾರದ ತಲೆ ಕೆಡಿಸುತ್ತಿರುವ ಎಷ್ಟೋ ಶೈಕ್ಷಣಿಕ ಸಮಸ್ಯೆಗಳು ಹುಟ್ಟುತ್ತಿದ್ದಿಲ್ಲ, ಭಾಷಾ ದುರಭಿಮಾನ, ಪ್ರಾಂತೀಯ ಅತಿರೇಕತೆ ಹಾಗು ಇಂಗ್ಲೀಷಿನ ವ್ಯಾಮೋಹ ಅತಿಯಾಗಿ 'ಇದು

ನಮ್ಮ ಭಾರತ' ಎಂಬ ಹೆಮ್ಮೆಯು ಮಾತು ಜನಮಾನದಿಂದ ಮಾಯವಾಗುತ್ತ ನಡೆದಿದೆ.

ಸ್ವತಂತ್ರ ಭಾರತಕ್ಕೆ ತನ್ನದೇ ಆದ ರಾಜ್ಯಘಟನೆಯನ್ನು ನಿರ್ಮಾಣ ಮಾಡಿ ಭಾರತದ ರಾಜ್ಯಾಡಳಿತವನ್ನೇನೋ ಸಂಯೋಜನಗೊಳಿಸಲಾಯಿತು. ಆದರೆ ಶಿಕ್ಷಣವನ್ನು ಪ್ರಾಂತೀಯ ಸರಕಾರಗಳಿಗೆ ಒಪ್ಪಿಸಿ ಒಂದು ಮಹಾಪ್ರಮಾದ ವನ್ನೇ ಎಸಗಿದಂತಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರ ಸರಕಾರದ ಸ್ಥಾನ ಮಾನಗಳು ಪ್ರಭಾವಶಾಲಿಯಾಗಿ ಉಳಿದಿಲ್ಲ. ಪ್ರಾಂತೀಯ ಸ್ವಾಯತ್ತತೆಯ ಮಟ್ಟಿನಲ್ಲಿ ಪ್ರಾಂತಿಕ ಸರಕಾರಗಳು ಕೇಂದ್ರದ ಶೈಕ್ಷಣಿಕ ಧ್ಯೇಯ ಧೋರಣೆಗಳನ್ನು ಗಾಳಿಗೆ ತೂರುತ್ತ ನಡೆದಿವೆ. ಭಾರತದಲ್ಲಿ ಏಕರೂಪ ರಾಷ್ಟ್ರೀಯ ಶಿಕ್ಷಣವಿರಬೇಕೆಂಬವರಿಗೆಲ್ಲ ಇದರಿಂದ ತೀವ್ರ ನಿರಾಶೆಯಾಗಿದೆ. ಈ ತಪ್ಪನ್ನು ತಡವಾದರೂ ಚಿಂತೆಯಿಲ್ಲ ತಿದ್ದಿಕೊಳ್ಳಬೇಕೆಂಬ ಅಭಿಲಾಷೆ ಕೇಂದ್ರ ಸರಕಾರಕ್ಕೆ ಬಂದು, ಆ ರೀತಿಯಲ್ಲಿ ಪ್ರಯತ್ನ ನಡೆದರೆ ಅದಕ್ಕೆ ಘಟನಾಬದ್ಧ ಅಧಿಕಾರವಿದೆಯೇ ? ಎಂಬ ಪ್ರಶ್ನೆಯನ್ನು ಮುಂದೆ ಮಾಡಿ ಪ್ರಾಂತಿಕ ಸರಕಾರಗಳು ತಮ್ಮ ಮೇಲ್ಮೆಯನ್ನು ಮೆರೆಯಹತ್ತಿವೆ. ಹೀಗಾಗಿ ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆಳೆದಂತೆ ಶಿಕ್ಷಣ ಕ್ಷೇತ್ರದ ಸ್ಥಿತಿಯಾಗಿದೆ.

ಹಿರಿಯತನದ ಹೊಣೆಗಾರಿಕೆಯನ್ನಾದರೂ ನಿರ್ವಹಿಸಬೇಕೆಂಬ ಸದುದ್ದೇಶದಿಂದ ಕೇಂದ್ರವು ಮುಂದಾಗಿ ಅನೇಕ ಶೈಕ್ಷಣಿಕ ಆಯೋಗಗಳನ್ನು ನೇಮಿಸಿತು. ಆದರೆ ಅವರಲ್ಲಿಯೂ ಕ್ರಮಬದ್ಧತೆಯಿಲ್ಲ; ಶಾಶ್ವತ ನಿರ್ಧಾರವಿಲ್ಲ.

ಭಾರತದ ರಾಜ್ಯಘಟನೆಯ ೪೫ನೇ ಕಲಮಿನಂತೆ ೧೯೬೬ರೊಳಗೆ ೬ರಿಂದ ೧೪ ವರುಷದ ಮಕ್ಕಳಿಗೆಲ್ಲ ಒತ್ತಾಯದ ಪ್ರಕ್ಕಟೆ ಶಿಕ್ಷಣವನ್ನು ಕೊಡಬೇಕೆಂಬ ತತ್ವವನ್ನು ಒಪ್ಪಿಕೊಳ್ಳಲಾಗಿದೆ. ಅದರಂತೆ ಆ ವಯಸ್ಸಿನ ಮಕ್ಕಳಿಗೆಲ್ಲ ಪ್ರಾಥಮಿಕ ಶಿಕ್ಷಣವನ್ನು ಸುವ್ಯವಸ್ಥಿತವಾಗಿ ಒದಗಿಸುವ ಅಖಿಲ ಭಾರತ ಯೋಜನೆಯೊಂದನ್ನು ಮೊದಲು ಕೈಕೊಳ್ಳಲೇಬೇಕಾಗಿತ್ತು. ಗಾಂಧೀಜಿ ಪ್ರಣೀತ ಮೂಲ ಶಿಕ್ಷಣವು ರಾಷ್ಟ್ರೀಯ ಪ್ರಾಥಮಿಕ ಶಿಕ್ಷಣ ಯೋಜನೆಯೆಂದು ಒಪ್ಪಿಕೊಂಡಿದ್ದರೂ, ಅದರ ಸಾರ್ವತ್ರಿಕ ಬಳಕೆಗಾಗಿ ಪ್ರಾಮಾಣಿಕ ಪ್ರಯತ್ನಗಳು ನಡೆಯಬೇಕಾಗಿದ್ದವು. ಪ್ರಜಾಪ್ರಭುತ್ವದ ಯಶಸ್ಸಿಗೆ ಪ್ರತಿಯೊಬ್ಬ ನಾಗರಿಕನೂ ಕನಿಷ್ಠ ಏಳು ವರುಷಗಳ ಪ್ರಾಥಮಿಕ ಶಿಕ್ಷಣವನ್ನು ಪಡೆದಿರಬೇಕೆಂಬ ಘಟನಾತ್ಮಕ ನಿರ್ದೇಶನಕ್ಕೆ ಮಹತ್ವವಿತ್ತು. ಅಖಿಲ ಭಾರತ ಪ್ರಾಥಮಿಕ ಶಿಕ್ಷಣಾಯೋಗವನ್ನು ನೇಮಿಸಿ ಪ್ರಾಥಮಿಕ ಶಿಕ್ಷಣದ ಭದ್ರ ಬುನಾದಿಯನ್ನಾದರೂ ಹಾಕಲೇಬೇಕಾಗಿತ್ತು. ಆದರೆ ನಮ್ಮ ಸರಕಾರ ಹಾಗೆ ಮಾಡದೆ ವಿಶ್ವವಿದ್ಯಾಲಯ ಶಿಕ್ಷಣದ ಪುನರ್ಘಟನೆಯನ್ನು ಮೊದಲು ಕೈಗೆತ್ತಿಕೊಂಡಿತು. ಅದಕ್ಕಾಗಿ ೧೯೪೮ರಲ್ಲಿಯೇ ಡಾ॥ ರಾಧಾಕೃಷ್ಣನ್ನರವರ ಹಿರಿಯತನದಲ್ಲಿ ಒಂದು ಆಯೋಗವನ್ನು ನಿಯಮಿಸಿತು. ಸರಕಾರವು ಸ್ಪಷ್ಟಪಡಿಸಿ ಕೇಳಿಕೊಳ್ಳಲಾದ ವಿಶ್ವವಿದ್ಯಾಲಯ ಶಿಕ್ಷಣದ ಸುಧಾರಣೆಯನ್ನೇ ಗಮನದಲ್ಲಿಟ್ಟುಕೊಂಡು ಆ ಆಯೋಗವು ತನ್ನ ವಿದ್ವತ್ಪೂರ್ಣ ವರದಿಯನ್ನು ಒಪ್ಪಿಸಿತು. ಈ ವರದಿಯನ್ನು ಆಧರಿಸಿ ಹಲಕೆಲವು ಸುಧಾರಣೆಗಳನ್ನು ಕೈಕೊಳ್ಳಲಾಯಿತು.

ಆದರೆ ಮಾಧ್ಯಮಿಕ ಶಿಕ್ಷಣದ ಪುನರ್ಘಟನೆಯಿಲ್ಲದೆ ವಿಶ್ವವಿದ್ಯಾಲಯ ಪುನರ್ಘಟನೆಯು ಯಶಸ್ವಿಯಾಗಲಾರದೆಂಬ ತಪ್ಪು ತಡವಾಗಿ ತಿಳಿದುಬಂದದ್ದರಿಂದ ೧೯೫೨ರಲ್ಲಿ ಡಾ॥ ಲಕ್ಷ್ಮಣಸ್ವಾಮಿ ಮುದಲಿಯಾರರ ನೇತೃತ್ವದಲ್ಲಿ ಮಾಧ್ಯಮಿಕ ಶಿಕ್ಷಣಾಯೋಗವನ್ನು ರಚಿಸಲಾಯಿತು. ಅದರ ಕಾರ್ಯವ್ಯಾಪ್ತಿಯನ್ನು ಮಾಧ್ಯಮಿಕ ಶಿಕ್ಷಣಕ್ಕಷ್ಟೇ ಸೀಮಿತಗೊಳಿಸಿದ್ದರಿಂದ, ಅದೂ ಕೂಡಾ ಪ್ರಾಥಮಿಕ ಶಿಕ್ಷಣದ ಸುಧಾರಣೆಯನ್ನು ಕೈಗೆತ್ತಿಕೊಳ್ಳಲಿಲ್ಲ. ಮುದಲಿಯಾರ್ ಸಮಿತಿಯು ದೇಶವ್ಯಾಪೀ ಮಾಧ್ಯಮಿಕ ಶಿಕ್ಷಣವನ್ನು ಪುನರ್ಘಟಿಸುವ ಉದ್ದೇಶದಿಂದ ಒಳ್ಳೇ ವಿಸ್ತತ್ಪೂರ್ಣ ವರದಿಯನ್ನು ತಯಾರಿಸಿ, ಏಷ್ಟೋ ಉಪಯುಕ್ತ ಸಲಹೆ ಸೂಚನೆಗಳನ್ನು ಮಾಡಿತು. ಆದರೆ ಮಾಧ್ಯಮಿಕ ಶಿಕ್ಷಣವು ಪ್ರಾಂತೀಯ ಸರಕಾರಗಳ ಕಕ್ಷೆಯಲ್ಲಿ ಬರುವ ವಿಷಯವಾದ್ದರಿಂದ, ಪುನಃ ಏಕರೂಪತೆಯ ಮಾಧ್ಯಮಿಕ ಶಿಕ್ಷಣವು ಕಾರ್ಯರೂಪದಲ್ಲಿ ಬರುವದು ದುಸ್ತರವಾಯಿತು. ಇದರಿಂದ ಈವರೆಗೂ, ಅಂದರೆ ಡಾ॥ ಕೊಠಾರಿ ಸಮಿತಿಯನ್ನು (೧೯೬೪) ಭಾರತದ ಸಮಗ್ರ ಶಿಕ್ಷಣವನ್ನು ಪರಿಶೀಲಿಸಲು ನೇಮಿಸುವವರೆಗೂ, ಪ್ರಾಥಮಿಕ ಮಾಧ್ಯಮಿಕ ಹಾಗು ವಿಶ್ವವಿದ್ಯಾಲಯ ಶಿಕ್ಷಣದಲ್ಲಿ ಹೊಂದಾಣಿಕೆಯೇ ಕಂಡುಬರಲಿಲ್ಲ. ಅದರ ಪರಿಣಾಮವಾಗಿ ಭಾರತೀಯ ಶಿಕ್ಷಣ ಪದ್ಧತಿಯು ಏಕರೂಪತೆಯನ್ನು ಹೊಂದದೆ, ಬಹುರೂಪದಲ್ಲಿಯೇ. ಇಂದಿನವರೆಗೂ ಬೆಳೆದು ಬಂದಿದೆ.

ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡಿರುವ ಶೈಕ್ಷಣಿಕ ಅಭಿವೃದ್ಧಿಯನ್ನು ಕೈಕೊಳ್ಳಲಾಯಿತು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣಕ್ಕಾಗಿ ೧೫೩ ಕೋಟಿ ರೂಪಾಯಿಗಳನ್ನು ತೆಗೆದಿಟ್ಟು ಕೊನೆಗೆ ೧೩೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ೩೦೭ ಕೋಟಿ ರೂಪಾಯಿಗಳನ್ನು ತೆಗೆದಿರಿಸಿ ೨೫೭ ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಯಿತು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮಾತ್ರ ಗೊತ್ತುಪಡಿಸಿದ ೫೬೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ ಅಂದರೆ ೫೬೭ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು. ಚತುರ್ಥ ಯೋಜನೆಯಲ್ಲಿ ೧೨೧೦ ಕೋಟಿ ರೂಪಾಯಿಗಳನ್ನು ವೆಚ್ಚಮಾಡಬೇಕೆಂದು ಯೋಜಿಸಲಾಗಿದೆ. ನಿಜವಾದ ವೆಚ್ಚ ಎಷ್ಟಾಗುವದೋ ಕಾದು ನೋಡಬೇಕು.

೧೯೪೭ ರಿಂದ ಈವರೆಗೂ ಅಂದರೆ ೧೯೬೭ರ ವರೆಗೂ ರಾಷ್ಟ್ರೀಯ ಗೊತ್ತು ಗುರಿ. ಧ್ಯೇಯ–ಧೋರಣೆಗಳನ್ನು ಹೊರತು ಪಡಿಸಿ ಶಿಕ್ಷಣವು ಸಾಕಷ್ಟು ಬೆಳೆದಿದೆ. ಮುದಲಿಯಾರ ಸಮಿತಿಯ ವರದಿ. ರಾಧಾಕೃಷ್ಣನ್ ಸಮಿತಿಯ ವರದಿ ಹಾಗು ಮೂರು ಪಂಚವಾರ್ಷಿಕ ಯೋಜನೆಗಳ ಹಿನ್ನೆಲೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗು ವಿಶ್ವವಿದ್ಯಾಲಯ ಶಿಕ್ಷಣದ ಸುಧಾರಣೆ ಹಾಗು ಪ್ರಗತಿಯನ್ನು ಈ ಸಂದರ್ಭದಲ್ಲಿ ಅವಲೋಕಿಸಬೇಕು.

(ಅ) ಪ್ರಾಥಮಿಕ ಶಿಕ್ಷಣ: ಪ್ರಜಾಪ್ರಭುತ್ವ ಯಶಸ್ವಿಯಾಗಿ ಸಾಗಬೇಕಾದರೆ, ಪ್ರತಿಯೊಬ್ಬ ನಾಗರಿಕನಿಗೆ ಕನಿಷ್ಠ

ಪ್ರಾಥಮಿಕ ಶಿಕ್ಷಣವಾದರೂ ದೊರೆಯಬೇಕು. ಅದರಂತೆ ನಮ್ಮ ರಾಜ್ಯ ಘಟನೆಯು ಈ ಮಾತನ್ನು ಮಾನ್ಯಮಾಡಿ ಒತ್ತಾಯದ ಪ್ರಾಥಮಿಕ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟಿದೆ. ಗಾಂಧೀಜಿಯವರ ಮೂಲ ಶಿಕ್ಷಣವು ಪ್ರಾಥಮಿಕ ಶಿಕ್ಷಣದ ಅಭ್ಯಾಸ ಕ್ರಮವಾಗಬೇಕೆಂದು ಒಪ್ಪಿಕೊಳ್ಳಲಾಗಿದೆ. ಆದರೂ ಇಂದು ಭಾರತದಲ್ಲಿ ಎರಡು ಬಗೆಯ ಪ್ರಾಥಮಿಕ ಶಿಕ್ಷಣ ಕ್ರಮಗಳು ಬಳಕೆಯಲ್ಲಿವೆ. ಅವಾವುವೆಂದರೆ: (೧) ಮೂಲ ಶಿಕ್ಷಣವನ್ನು ಅಳವಡಿಸಿಕೊಂಡ ಪ್ರಾಥಮಿಕ ಶಾಲೆಗಳು. (೨) ಶಹರಗಳಲ್ಲಿಯ ಸಾಮಾನ್ಯ ಪ್ರಾಥಮಿಕ ಶಾಲೆಗಳು. ಚಟುವಟಿಕೆ ಪ್ರಧಾನ ಮೂಲಶಿಕ್ಷಣವು ದೋಷಪೂರಿತ ಪ್ರಯೋಗ ಹಾಗು ವಿಧಾನಗಳ ಕಾರಣಕ್ಕಾಗಿ ಇಂದು ಹಿಂದೆ ಬೀಳಹತ್ತಿದೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಒಂದೇ ಬಗೆಯ ಅಭ್ಯಾಸ ಕ್ರಮಕ್ಕಾಗಿ ಪ್ರಯತ್ನಿಸಲಾಯಿತು. ೧೯೪೭ರಲ್ಲಿ ೧.೭೨.೬೬೧ ಪ್ರಾಥಮಿಕ ಶಾಲೆಗಳಿದ್ದರೆ ೧೯೬೬ರಲ್ಲಿ ಅವು ೪ ಲಕ್ಷಕ್ಕೂ ಮಿಕ್ಕಿವೆ. ವಿದ್ಯಾರ್ಥಿಗಳ ಸಂಖ್ಯೆ ೧೪೧ ಲಕ್ಷದಿಂದ ೫೧೨ ಲಕ್ಷದವರೆಗೆ ಏರಿದೆ. ಶಿಕ್ಷಕರ ಸಂಖ್ಯೆಯು ೮ ಲಕ್ಷದಿಂದ ೧೧ ಲಕ್ಷದವರೆಗೆ ಬೆಳೆದಿದೆ. ಸರಕಾರ ಮೊದಲು ಪ್ರತಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗೆ ೧೪ ರೂಪಾಯಿ ಖರ್ಚು ಮಾಡುತ್ತಿದ್ದರೆ ಈಗ ೩೦ ರೂಪಾಯಿ ಖರ್ಚು ಮಾಡುತ್ತದೆ. ಅಂಕಿಸಂಖ್ಯೆಗಳಿಂದ ಪ್ರಗತಿ ಕಂಡು ಬರುತ್ತಿದ್ದರೂ ಶೈಕ್ಷಣಿಕ ಮಟ್ಟವನ್ನು ಮಾತ್ರ ಕಾಯ್ದುಕೊಳ್ಳುವದಾಗಲಿಲ್ಲ. ಸಾರ್ವತ್ರಿಕ ಒತ್ತಾಯದ ಶಿಕ್ಷಣವನ್ನು ಒಪ್ಪಿಕೊಂಡ ಮೇಲೆ ವಿದ್ಯಾರ್ಥಿಗಳಿಗೆ

ಬೇಕಾಗುವ ಹೊಸ ಹೊಸ ಕಟ್ಟಡ. ಸಾಕಷ್ಟು ಶಿಕ್ಷಕವರ್ಗ, ಶಾಲೆಯ ಸಲಕರಣೆ ಇತ್ಯಾದಿಗಳನ್ನು ಸರಿಯಾಗಿ ಒದಗಿಸುವ ಹೊಣೆಯನ್ನು ಸರಕಾರ ಸರಿಯಾಗಿ ನಿರ್ವಹಿಸಬೇಕು. ಶಿಕ್ಷಕನ ಸಂಬಳದಲ್ಲಿ ಇನ್ನೂ ಏಕರೂಪತೆಯನ್ನು ತರುವದಾಗಿಲ್ಲ. ಪ್ರಾಥಮಿಕ ಶಿಕ್ಷಣವು ಸಾರ್ವತ್ರಿಕವಾಗಿ ಬೆಳೆಯಬೇಕಾದರೆ, ವಿಶ್ವ ವಿದ್ಯಾಲಯ ಧನಸಹಾಯ ಆಯೋಗದಂತೆ, ಪ್ರಾಥಮಿಕ ಶಿಕ್ಷಣ ಧನಸಹಾಯ ಆಯೋಗವೂ ರಚಿತವಾಗಬೇಕು.

(ಬ) ಮಾಧ್ಯಮಿಕ ಶಿಕ್ಷಣ: ಮುದಲಿಯಾರ ಸಮಿತಿಯ ಶಿಫಾರಸುಗಳನ್ವಯ ಹೆಚ್ಚು ಪ್ರಾಂತಗಳಲ್ಲಿ ಉಚ್ಚ ಮಾಧ್ಯಮಿಕ ಶಾಲೆಗಳು ಅಸ್ತಿತ್ವದಲ್ಲಿ ಬಂದಿವೆ. ತ್ರಿಭಾಷಾ ಸೂತ್ರದಂತೆ ಮಾತೃಭಾಷೆ. ಹಿಂದಿ ಹಾಗು ಇಂಗ್ಲೀಷ್ ಕಲಿಸಲ್ಪಡುತ್ತವೆ. ಕೆಲವೊಂದು ಪ್ರಾಂತಗಳಲ್ಲಿ ಮಾಧ್ಯಮಿಕ ಶಿಕ್ಷಣವು ಪುಕ್ಕಟೆಯಾಗಿದ್ದರೆ. ಇನ್ನುಳಿದವುಗಳಲ್ಲಿ ಫೀ ವಸೂಲ ಮಾಡಲಾಗುತ್ತದೆ. ಭಾರತ ಸರಕಾರವು ಪ್ರಾಥಮಿಕ ಶಿಕ್ಷಣದಂತೆ ಮಾಧ್ಯಮಿಕ ಶಿಕ್ಷಣವನ್ನು ಸರಕಾರದ ಹೊಣೆಯೆಂದು ಹೊರಲು ಒಪ್ಪಿಕೊಂಡಿಲ್ಲ. ಅದ್ದರಿಂದ ಉಚ್ಚ ಮಾಧ್ಯಮಿಕ ಅಥವಾ ಮಾಧ್ಯಮಿಕ ಶಿಕ್ಷಣದಲ್ಲಿ ಏಕರೂಪತೆಯು ಇಲ್ಲ.

ಮುದಲಿಯಾರ ಸಮಿತಿಯ ಶಿಫಾರಸಿನಂತೆ ಮಾಧ್ಯಮಿಕ ಶಿಕ್ಷಣವನ್ನು ಸ್ವಯಂಪೂರ್ಣವೆಂದು ಗಣಿಸಲಾಗುತ್ತದೆ. ಬಹುಜನ ವಿದ್ಯಾರ್ಥಿಗಳು ಈ ಹಂತದಲ್ಲಿ ತಮ್ಮ ಶಿಕ್ಷಣ ಮುಗಿಸುವದರಿಂದ ಅವರಿಗೆ ಸ್ವತಂತ್ರ ನಾಗರಿಕರಾಗಿ ಜೀವನ ನಡೆಸಲು ಅವಶ್ಯಕವಾದ ಜ್ಞಾನ ಪ್ರಾಪ್ತಿಯಾಗುವಂತೆ ನೋಡಿಕೊಳ್ಳಲಾಗುತ್ತದೆ. ಮತ್ತು

ಇದೇ ಹಂತದಲ್ಲಿ ಬೇರೆ ಬೇರೆ ವೃತ್ತಿಶಿಕ್ಷಣ ದೊರೆಯುವಂತೆ ತಾಂತ್ರಿಕ, ಒಕ್ಕಲುತನ, ವಾಣಿಜ್ಯ ಶಿಕ್ಷಣಕ್ಕಾಗಿ ಮಾಧ್ಯಮಿಕ ಶಾಲೆಗಳನ್ನು ತೆರೆಯಲಾಗಿದೆ. ವಿಶ್ವವಿದ್ಯಾಲಯಗಳಿಗೆ ಪ್ರವೇಶ ದೊರಕಿಸುವವರಿಗೆ ಒಂದು ವರ್ಷದ ಪಿ.ಯು.ಸಿ. ವರ್ಗವನ್ನು ಮಾಧ್ಯಮಿಕ ಶಾಲೆಗಳಿಗೆ ಜೋಡಿಸಲಾಗಿದೆ. ಅಂಥ ಶಾಲೆಗಳಿಗೆ ಉಚ್ಚ ಮಾಧ್ಯಮಿಕ ಶಾಲೆಗಳೆಂದು ಹೆಸರು. ಉಚ್ಚ ಮಾಧ್ಯಮಿಕ ಶಾಲೆಯಿಂದ ಹೊರಬಿದ್ದ ವಿದ್ಯಾರ್ಥಿಗಳು ನೇರವಾಗಿ ಪದವಿ ವರ್ಗಗಳಿಗೆ ಪ್ರವೇಶ ಪಡೆಯಬಲ್ಲರು. ಆದರೆ ಮುದಲಿಯಾರ ಸಮಿತಿಯು ೯ನೇ ವರ್ಗದಲ್ಲಿ ಐಚ್ಛಿಕ ವಿಷಯಗಳನ್ನು ಆರಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದು ಅಷ್ಟು ಸಮರ್ಪಕವಾಗಿಲ್ಲವೆಂಬ ಟೀಕೆ ಇತ್ತಿತ್ತಲಾಗಿ ಕೇಳಬರುತ್ತದೆ.

ಒತ್ತಾಯದ ಪ್ರಾಥಮಿಕ ಶಿಕ್ಷಣದ ಪರಿಣಾಮವಾಗಿ ಮಾಧ್ಯಮಿಕ ಶಾಲೆಗಳನ್ನು ಪ್ರವೇಶಿಸುವ ವಿದ್ಯಾರ್ಥಿಗಳ ಸಂಖ್ಯೆ ವಿಪರೀತವಾಗಿದೆ. ಆದರೆ ಮಾಧ್ಯಮಿಕ ಶಿಕ್ಷಣದ ಹೊರೆಯನ್ನು ಸರಕಾರ ಸಂಪೂರ್ಣ ಹೊರಲು ಸಿದ್ಧವಿಲ್ಲ. ಹೀಗಾಗಿ ಖಾಸಗಿ ಸಂಸ್ಥೆಗಳು ಮುಂದಾಗಿ ತಮ್ಮ ತಮ್ಮ ಸ್ಥಳಗಳಲ್ಲಿ ಮಾಧ್ಯಮಿಕ ಶಾಲೆಗಳನ್ನು ತೆರೆಯುತ್ತಿವೆ. ವಿದ್ಯಾರ್ಥಿಗಳ ಬೇಡಿಕೆಯನ್ನು ಪೂರೈಸಹೊರಟ ಇಂಥ ಸಂಸ್ಥೆಗಳು ಸರಿಯಾದ ಕಟ್ಟಡ, ಸಲಕರಣೆ, ಉಪಕರಣಗಳ ಕೊರತೆಯಿಂದ ಸಮರ್ಥ ಶಿಕ್ಷಣ ನೀಡಲು ಅಸಮರ್ಥವಾಗಿವೆ. ಹೀಗಾಗಿ ಮಾಧ್ಯಮಿಕ ಹಾಗು ಉಚ್ಚ ಮಾಧ್ಯಮಿಕ ಶಿಕ್ಷಣದ ಮಟ್ಟ ಅತ್ಯಂತ ಕೆಳಗಿಳಿಯುತ್ತಿದೆ. ಈ ಮೂಲಕಾರಣವನ್ನು ಮರೆಮಾಡಿ ಮಾಧ್ಯಮಿಕ ಶಿಕ್ಷಣದ ಮಟ್ಟ

ವಿಸ್ತರಿಸುವ ಪ್ರಯತ್ನಗಳಾದ ಸೆಮಿನಾರ್, ರಿಫ್ರೆಶರ ಕೋರ್ಸ್ ಮುಂತಾದ ಯೋಜನೆಗಳನ್ನು ಯಶಸ್ವಿಗೊಳಿಸುವದು ಅಸಾಧ್ಯವಾಗಿದೆ. ಇದರ ಅತ್ಯಂತಿಕ ಪರಿಣಾಮವು ವಿಶ್ವವಿದ್ಯಾಲಯ ಶಿಕ್ಷಣದ ಮೇಲೂ ಆಗುತ್ತ ನಡೆದಿದೆ. ರೋಗವೊಂದಿದ್ದರೆ ಉಪಚಾರ ಬೇರೊಂದಾಗಿ ಇಚ್ಛಿತ ಶೈಕ್ಷಣಿಕ ಫಲ ದೊರಕದಾಗಿದೆ.

ಮಾಧ್ಯಮಿಕ ಶಿಕ್ಷಕರ ಸಂಬಳದಲ್ಲಿಯೂ ಏಕರೂಪತೆಯಿಲ್ಲ. ಒಂದೊಂದು ಪ್ರಾಂತದವರು ಒಂದೊಂದು ವೇತನ ಶ್ರೇಣಿಯನ್ನು ಅನುಸರಿಸಿದ್ದಾರೆ. ಉಚ್ಚಮಾಧ್ಯಮಿಕ ವರ್ಗಗಳಿಗೆ ಎಂ. ಎ., ಎಂ. ಎಸ್‌ಸಿ. ಪದವೀಧರರು ಇರಬೇಕೆಂದು ವಿಧಿಸಿದರೂ ಅವರಿಗೆ ಪ್ರತ್ಯೇಕ ವೇತನ ಶ್ರೇಣಿಯಿರದ್ದರಿಂದ ಉಚ್ಚಶಿಕ್ಷಣ ಪಡೆದ ಪದವೀಧರರು ಅತ್ತ ಹೊರಳುತ್ತಿಲ್ಲ. ಮೊದಲಿನ ವರ್ಗ ದೊರಕಿಸದ ಸಾಮಾನ್ಯರು ನಿರ್ವಾಹವಿಲ್ಲದೆ ಇಂಥ ಉಚ್ಚಮಾಧ್ಯಮಿಕ ಶಾಲೆಗಳತ್ತ ಹೊರಳುತ್ತಿದ್ದಾರೆ. ಉಚ್ಚಶಿಕ್ಷಣ ಪಡೆದ ಪದವೀಧರರನ್ನು ಆಕರ್ಷಿಸುವದಿದ್ದರೆ ಅವರಿಗೆ ಆಕರ್ಷಕ ವೇತನ ಶ್ರೇಣಿಯನ್ನು ಗೊತ್ತುಮಾಡಬೇಕು.

ವಿವಿಧೋದ್ದೇಶ ತಾಂತ್ರಿಕ ಶಾಲೆಗಳಾದರೂ ಯಶಸ್ವಿಯಾಗುತ್ತಿಲ್ಲ. ಯಾಕೆಂದರೆ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣ ಮುಗಿಸಿದ ಮೇಲೆ ಉದ್ಯೋಗಾವಕಾಶಗಳು ಸಾಕಷ್ಟು ಲಭ್ಯವಿಲ್ಲ. ಔದ್ಯೋಗಿಕ ಬೆಳವಣಿಗೆ. ತಾಂತ್ರಿಕ ಜ್ಞಾನಗಳಲ್ಲಿ ಹೊಂದಾಣಿಕೆಯಿರಬೇಕು. ಅವು ಒಂದಕ್ಕೊಂದು ಪೂರಕವಾಗಿರದಿದ್ದರೆ ತಾಂತ್ರಿಕ ಶಿಕ್ಷಣ ಪಡೆದವರನ್ನು ನಿರುದ್ಯೋಗ ಕಾಡುತ್ತದೆ.

೧೯೪೭ರಲ್ಲಿ ಇಡೀ ಭಾರತದಲ್ಲಿ ೧೨,೮೦೩ ಮಾಧ್ಯಮಿಕ ಶಾಲೆಗಳಿದ್ದರೆ ೧೯೬೬ರಲ್ಲಿ ಅವು ೬೮,೦೦೦ ಕ್ಕೇರಿವೆ. ವಿದ್ಯಾರ್ಥಿಗಳ ಸಂಖ್ಯೆಯು ೧೮ ಲಕ್ಷದಿಂದ ೧೧೦ ಲಕ್ಷಕ್ಕೇರಿದೆ. ಶಿಕ್ಷಕರ ಸಂಖ್ಯೆಯು ೭೨,೪೧೩ ರಿಂದ ೫ ಲಕ್ಷಕ್ಕೆ ಮಿಕ್ಕಿದೆ. ಮಾಧ್ಯಮಿಕ ಶಾಲೆಗಳಿಗಾಗುವ ಖರ್ಚು ೫ ಲಕ್ಷದಿಂದ ೭೨ ಕೋಟಿ ರೂಪಾಯಿಗಳಿಗೇರಿದೆ.

ಹಾಗೆಯೇ ಉಚ್ಚಮಾಧ್ಯಮಿಕ ಶಾಲೆಗಳಲ್ಲಿಯು ವಿದ್ಯಾರ್ಥಿಗಳ ಸಂಖ್ಯೆಯು ೧೦ ಲಕ್ಷದಿಂದ ೫೧ ಲಕ್ಷದವರೆಗೆ. ಶಿಕ್ಷಕರ ಸಂಖ್ಯೆ ೮೮ ಸಾವಿರದಿಂದ ೪.೫೦ ಲಕ್ಷದವರೆಗೆ. ಉಚ್ಚಮಾಧ್ಯಮಿಕ ಶಾಲೆಗಳ ಖರ್ಚು ೧೨ ಕೋಟಿ ರೂಪಾಯಿಗಳಿಂದ ೧೧೮ ಕೋಟಿ ರೂಪಾಯಿಗಳವರೆಗೆ. ಪ್ರತಿ ವಿದ್ಯಾರ್ಥಿಗಾಗಿ ಆಗುವ ಖರ್ಚು ೫೫ ರೂಪಾಯಿಯಿಂದ ೧೦೭ ರೂಪಾಯಿಗಳವರೆಗೆ ಏರಿದೆ. ೧೯೫೬ರಲ್ಲಿ ಭಾರತದಲ್ಲಿ ೩೭೪ ವಿವಿಧೋದ್ದೇಶ ಮಾಧ್ಯಮಿಕ ಶಾಲೆಗಳಿದ್ದರೆ ೧೯೬೬ರಲ್ಲಿ ಅವು ೨೧೧೫ಕ್ಕೇರಿವೆ. ಇವುಗಳಲ್ಲದೆ ಕೇಂದ್ರ ಸರಕಾರದ ನೌಕರರ ಮಕ್ಕಳಿಗಾಗಿ ೧೦೦ ಕೇಂದ್ರ ಮಾಧ್ಯಮಿಕ ಶಾಲೆಗಳನ್ನೂ ತೆರೆಯಲಾಗಿದೆ.

ಮುದಲಿಯಾರ ಸಮಿತಿಯು ಅಪೇಕ್ಷೆಯಂತೆ ಅವರ ಎಷ್ಟೋ ಶಿಫಾರಸುಗಳನ್ನು ಒಪ್ಪಿಕೊಂಡಿದ್ದರೂ, ಮಾಧ್ಯಮಿಕ ಶಿಕ್ಷಣದ ವಿಸ್ತಾರದಿಂದ ಅಪೇಕ್ಷಿತ ಪ್ರಗತಿಯು ಕಂಡು ಬಂದಿಲ್ಲ. ಇಲ್ಲಿಯೂ ಮಾಧ್ಯಮಿಕ ಶಿಕ್ಷಣ ಸಹಾಯಧನ ಆಯೋಗವನ್ನು ರಚಿಸಿ, ಮಾಧ್ಯಮಿಕ ಶಿಕ್ಷಣದ ಯೋಗಕ್ಷೇಮ ನೋಡಿಕೊಳ್ಳುವದು ಅವಶ್ಯವಾಗಿದೆ.

(ಕ) ಉಚ್ಚಶಿಕ್ಷಣ: ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣ ವಿಸ್ತಾರಗೊಂಡಂತೆ ಉಚ್ಚಶಿಕ್ಷಣವು ಅದೇ ಗತಿಯಿಂದ ಬೆಳೆದು ಬಂದಿದೆ. ಅಮೇರಿಕೆಯಲ್ಲಿ ಉಚ್ಚಶಿಕ್ಷಣ ಕೊಡಲು ೨೦೦೦ ಶಿಕ್ಷಣ ಸಂಸ್ಥೆಗಳಿದ್ದರೆ, ಈಗ ಭಾರತದಲ್ಲಿ ಒಟ್ಟು ೨೫೦೦ ಶಿಕ್ಷಣ ಸಂಸ್ಥೆಗಳಿವೆ. ಸುಮಾರು ೧೭ ಲಕ್ಷ ವಿದ್ಯಾರ್ಥಿಗಳು ೬೭ ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸ ಮಾಡಹತ್ತಿದ್ದಾರೆ. ಅವರಲ್ಲಿ ೧೦ ಲಕ್ಷ ವಿದ್ಯಾರ್ಥಿಗಳು ವಿದ್ಯಾರ್ಥಿ ಗೃಹಗಳಲ್ಲಿ ವಾಸಿಸುತ್ತಾರೆ. ಪ್ರತಿಶತ ೭೫ ವಿದ್ಯಾರ್ಥಿಗಳು ಸಾಮಾನ್ಯ ಶಿಕ್ಷಣ ಪಡೆಯುತ್ತಿದ್ದರೆ ೨೫ ವಿದ್ಯಾರ್ಥಿಗಳು ಶಾಸ್ತ್ರೀಯ ಶಿಕ್ಷಣ ಪಡೆಯುತ್ತಿದ್ದಾರೆ. ಶಾಸ್ತ್ರೀಯ ಶಿಕ್ಷಣ ಪಡೆದವರಲ್ಲಿ ಪ್ರತಿಶತ ೫ ವಿದ್ಯಾರ್ಥಿಗಳು ತಾಂತ್ರಿಕ, ವೈದ್ಯಕೀಯ, ಪಶುಶಾಸ್ತ್ರ ಮುಂತಾದ ವಿಷಯಗಳನ್ನು ಅಭ್ಯಸಿಸುತ್ತಾರೆ.

೧೯೪೭ರಲ್ಲಿ ಕೇವಲ ೨೦ ವಿಶ್ವವಿದ್ಯಾಲಯಗಳಿದ್ದರೆ ಅವು ಈಗ ೬೭ಕ್ಕೇರಿವೆ. ವೈಜ್ಞಾನಿಕ ಹಾಗು ಸಾಮಾನ್ಯ ಶಿಕ್ಷಣ ಕೊಡುವ ಕಾಲೇಜುಗಳ ಸಂಖ್ಯೆ ೪೨೦ ರಿಂದ ೧೭೦೦ ವರೆಗೆ ಅವುಗಳಲ್ಲಿ ಶಿಕ್ಷಣ ಪಡೆವ ವಿದ್ಯಾರ್ಥಿಗಳ ಸಂಖ್ಯೆ ೨ ಲಕ್ಷದಿಂದ ೧೦ ಲಕ್ಷಗಳ ವರೆಗೆ. ಪ್ರಾಧ್ಯಾಪಕರ ಸಂಖ್ಯೆ ೧೫.೩೧೨ ರಿಂದ ೫೦.೦೦೦ ವರೆಗೆ, ಆಗುತ್ತಿರುವ ಖರ್ಚು ೪.೭೯ ಕೋಟಿ ರೂಪಾಯಿಗಳಿಂದ ೫.೩೩ ಕೋಟಿ ರೂಪಾಯಿಗಳವರೆಗ, ಪ್ರತಿ ವಿದ್ಯಾರ್ಥಿಗಳಿಗೆ ಆಗುತ್ತಿರುವ ಖರ್ಚು ೨೨೩ ರೂಪಾಯಿಗಳಿಂದ ೩೨೬ ರೂಪಾಯಿಗಳವರೆಗೆ ಬೆಳೆದಿದೆ. ಹಾಗೆಯೇ ತಾಂತ್ರಿಕ ಹಾಗು ವೃತ್ತಿ ಶಿಕ್ಷಣದ ಕಾಲೇಜುಗಳ ಸಂಖ್ಯೆಯಾದರೂ ೧೪೦

ರಿಂದ ೧೩೫೦ ವರೆಗೆ. ಅವುಗಳಲ್ಲಿ ಅಭ್ಯಸಿಸುವ ವಿದ್ಯಾರ್ಥಿಗಳ ಸಂಖ್ಯೆ ೩೪,೦೦೦ ದಿಂದ ೪,೨೦,೦೦೦ ವರೆಗೆ. ಅವರಿಗಾಗಿ ಆಗುತ್ತಿರುವ ಖರ್ಚು ೧.೮೬ ಕೋಟಿ ರೂಪಾಯಿಗಳಿಂದ ೩೫. ಕೋಟಿ ರೂಪಾಯಿಗಳವರೆಗೆ ಏರಿದೆ.

ಮುದಲಿಯಾರ ಸಮಿತಿಯು ಶಿಫಾರಸಿನಂತೆ ಇಂಟರ ಮೀಡಿಯೇಟ ಕಾಲೇಜುಗಳು ಮುಚ್ಚಲ್ಪಟ್ಟವು. ಮತ್ತು ಮೂರು ವರುಷದ ಪದವೀವರ್ಗಗಳು ತೆರೆಯಲ್ಪಟ್ಟವು. ಉಚ್ಚ ಮಾಧ್ಯಮಿಕ ಶಾಲೆಗಳಿಗೆ ಒಂದು ವರ್ಷ ಸೇರಿಸಿ ಪಿ. ಯು.ಸಿ . ವರ್ಗ ತೆರೆಯಲು ಅವಕಾಶ ಕೊಟ್ಟರೂ. ಅವುಗಳೊಂದಿಗೆ ಕಾಲೇಜುಗಳೂ ಪಿ. ಯು. ಸಿ. ವರ್ಗಗಳನ್ನು ನಡೆಯಿಸುತ್ತವೆ. ಇದರಿಂದ ಶೈಕ್ಷಣಿಕ ಮಟ್ಟದಲ್ಲಿ ಅಂತರ ಕಂಡುಬರುತ್ತದೆ.

ರಾಧಾಕೃಷ್ಣನ್ ಸಮಿತಿಯು ಶಿಫಾರಸಿನಂತೆ ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಡಿಸೆಂಬರ ೧೯೫೩ರಲ್ಲಿ ಅಸ್ತಿತ್ವದಲ್ಲಿ ಬಂದು. ಸಂಸತ್ತಿನ ಕಾಯಿದೆಯಂತೆ ನವಂಬರ ೧೯೫೬ ರಿಂದ ಶಾಸನಬದ್ಧ ಸಂಸ್ಥೆಯಾಗಿ ಕಾರ್ಯವಾಡುತ್ತಿದೆ. ಭಾರತದ ವಿಶ್ವವಿದ್ಯಾಲಯ ಶಿಕ್ಷಣ ನೋಡಿಕೊಳ್ಳಲು. ರಾಧಾಕೃಷ್ಣನ್ ಸಮಿತಿಯವರು ಮಾಡಿದ ಶಿಫಾರಸುಗಳಲ್ಲಿ ಇದು ಸರ್ವೋತ್ಕೃಷ್ಟ ಶಿಫಾರಸಾಗಿದೆ. ಕಳೆದ ಹತ್ತು ವರುಷಗಳಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ಒಂದು ನಿಬಂಧನೆಗೊಳಪಟ್ಟು ಬೆಳೆದಿದ್ದರೆ ಅದು ಯು. ಜಿ. ಸಿ. ಯ ಪ್ರಯತ್ನದಿಂದಲೇ ಎಂದು ಹೇಳಬಹುದು. ಸಂಶೋಧನೆ ಅಧ್ಯಯನಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೇರಿಸ

ಬೇಕೆಂಬ ಛಲದಿಂದ ೨೬ ಕೇಂದ್ರಗಳನ್ನು ತೆರೆದು. ವಿವಿಧ ವಿಷಯ ಗಳಲ್ಲಿ ವ್ಯಾಸಂಗ ಪ್ರಾರಂಭಿಸಲಾಗಿದೆ. ವಿಶ್ವವಿದ್ಯಾಲಯದ ಪಾಧ್ಯಾಪಕರ ವೇತನದಲ್ಲಿ ಏಕರೂಪತೆಯನ್ನು ತರಲಾಗಿದೆ.

ಭಾರತ ಸರಕಾರವಾದರೂ ತನ್ನ ನೇರ ಹೊಣೆಗಾರಿಕೆಯಲ್ಲಿ ದೇಶದಾದ್ಯಂತ ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಿ ನಡೆಯಿಸುತ್ತಿದೆ. ಈಗಾಗಲೇ ನಾಲ್ಕು ವಿಶ್ವವಿದ್ಯಾಲಯಗಳನ್ನು ನೇರವಾಗಿ ನಡೆಯಿಸುತ್ತದಲ್ಲದೆ. ಡೆಹರಾಡೂನ, ಖಡಕವಾಸಲಾ ಗಳಂಥ ಸ್ಥಳಗಳಲ್ಲಿ ಸೈನಿಕ ಕಾಲೇಜುಗಳನ್ನು ಮತ್ತು ನಾಲ್ಕಾರು ಸ್ಥಳಗಳಲ್ಲಿ ಸೈನಿಕ ಶಾಲೆಗಳನ್ನು ನಡೆಯಿಸುತ್ತಿದೆ. ಅಣು ಸಂಶೋಧನ ಸಂಸ್ಥೆ, ಔಷಧೋತ್ಪಾದನ ಸಂಸ್ಥೆ. ಕೇಂದ್ರ ತಾಂತ್ರಿಕ ವಿಜ್ಞಾನ ಸಂಸ್ಥೆಗಳಂಥ ಉಚ್ಚಸಂಶೋಧನಾ ಕೇಂದ್ರಗಳು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯ ಮಾಡುತ್ತಿವೆ.

ಆದರೂ ವಿಶ್ವವಿದ್ಯಾಲಯ ಶಿಕ್ಷಣದ ಪರಿಣಾಮವು ಸಮಾಧಾನಕರವಾಗಿಲ್ಲವೆಂದು ತಜ್ಞರು ಅಭಿಪ್ರಾಯಪಡು ತ್ತಾರೆ. ಅವರ ಅಭಿಪ್ರಾಯದಂತೆ–ವಿಶ್ವವಿದ್ಯಾಲಯ ಶಿಕ್ಷಣ ಪಡೆದ ವಿದ್ಯಾರ್ಥಿಗಳು, ತಮ್ಮ ಶಿಕ್ಷಣಕ್ಕನುಗುಣವಾಗಿ ಒಳ್ಳೇ ಜೀವನ ನಡೆಯಿಸುವ ಯೋಗ್ಯತೆಯನ್ನೇ ಬೆಳೆಯಿಸಿಕೊಂಡಿರುವ ದಿಲ್ಲ. ಮತ್ತು ಭಾರತವು ಕಲ್ಯಾಣ ರಾಜ್ಯದತ್ತ ಸಾಗಿದ್ದರೂ ವಿಶ್ವವಿದ್ಯಾಲಯಗಳು ಈ ದಿಶೆಯಲ್ಲಿ ವಿದ್ಯಾರ್ಥಿಗಳನ್ನು ತರ ಬೇತುಗೊಳಿಸುತ್ತಿಲ್ಲ. ಲೆಕ್ಕವಿಲ್ಲದಷು ಶೈಕ್ಷಣಿಕ ಸಂಸ್ಥೆಗಳು ಬೆಳೆಯುತ್ತಿದ್ದರೂ ಹಾಗೂ ನೈತಿಕ ಮೌಲ್ಯಗಳು ಸರ್ವರಿಗೂ

ಅರ್ಥವಾಗುತ್ತಿದ್ದರೂ. ಅದು ರಕ್ತಗತವಾಗಿಲ್ಲ. ಇದೇ ವಿಷಯವಾಗಿ ಅಕ್ಟೋಬರ ೨೨. ೧೯೬೬ರ ಟ್ರಿಬ್ಯೂನ್ ಪತ್ರಿಕೆಯಲ್ಲಿ ಬರೆಯುತ್ತಾ ಡಾ॥ ರಾಧಾಕೃಷ್ಣನ್ ಅವರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ: "Today the tragedy of scepticism and nihilism is sweeping the student community. They have no purpose and direction in life. They lack hope. What can education give us, they ask."

ಭಾರತದಲ್ಲಿ ಶೈಕ್ಷಣಿಕ ಪ್ರಗತಿ

	ವಿವರ	೧೯೪೭	೧೯೬೬
೧	ಪ್ರತಿಶತ ಸಾಕ್ಷರತಾ ಪ್ರಸಾರ	೧೨.೨	೩೦
೨	ಶೈಕ್ಷಣಿಕ ಖರ್ಚು–ಕೋಟಿ ರೂ.ಗಳಲ್ಲಿ	೫೭.೬	೬೦೦
೩	ಪ್ರತಿ ವಿದ್ಯಾರ್ಥಿಗಾಗುವ ಖರ್ಚು-ರೂ.ಗಳಲ್ಲಿ	೧.೯೪	೧೨
	ಪ್ರಾಥಮಿಕ ಶಿಕ್ಷಣ		
೪	ಶಾಲೆಗಳು	೧,೭೨,೬೬೧	೪ ಲಕ್ಷ
೫	ವಿದ್ಯಾರ್ಥಿಗಳು–ಲಕ್ಷದಲ್ಲಿ	೧೪೧	೫೧೧.೪
೬	೬ರಿಂದ ೧೧ ವರುಷದ ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣ	೩೫	೭೨.೮
೭	ಶಿಕ್ಷಕರು–ಲಕ್ಷದಲ್ಲಿ	೪	೧೧.೫
೮	ಪ್ರತಿ ವಿದ್ಯಾರ್ಥಿಗೆ ಖರ್ಚು-ರೂಪಾಯಿಗಳಲ್ಲಿ	೧೪.೨	೩೦.೧

	ವಿವರ	೧೯೪೭	೧೯೬೬
	ಮಾಧ್ಯಮಿಕ ಶಿಕ್ಷಣ		
೯	ಶಾಲೆಗಳು	೧೨,೮೦೩	೭೮,೦೦೦
೧೦	ವಿದ್ಯಾರ್ಥಿಗಳು—ಲಕ್ಷದಲ್ಲಿ	೧೮	೧೧೦.೩೩
೧೧	೧೧ ರಿಂದ ೧೪ ವರುಷದ ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣ	೯	೩೨
೧೨	ಶಿಕ್ಷಕರು	೭೨,೪೧೩	೫.೨ ಲಕ್ಷ
	ಉಚ್ಚ ಮಾಧ್ಯಮಿಕ ಶಿಕ್ಷಣ		
೧೪	ವಿದ್ಯಾರ್ಥಿಗಳು—ಲಕ್ಷದಲ್ಲಿ	೧೦.೮	೫೧.೪
೧೫	ಶಿಕ್ಷಕರು	೮೭.೮೬೨	೪.೪೦.೦೦೦
೧೬	ಖರ್ಚು—ಕೋಟಿ ರೂ.ಗಳಲ್ಲಿ	೧೨.೨೨	೧೧೮
೧೭	ಪ್ರತಿ ವಿದ್ಯಾರ್ಥಿ ಖರ್ಚು-ರೂಪಾಯಿಗಳಲ್ಲಿ	೫೫.೭	೧೨೭.೪
೧೮	ವಿವಿಧೋದ್ದೇಶ ಶಾಲೆಗಳು	೩೭೪ (೧೯೫೬)	೨,೧೧೫
೧೯	ಕೇಂದ್ರ ಶಾಲೆಗಳು (ಕೇಂದ್ರ ಸರಕಾರದ ನೌಕರರ ಮಕ್ಕಳಿಗೆ	—	೧೦೦ (೧೯೬೩)

ವಿವರ	೧೯೪೭	೧೯೬೬
ವಿಶ್ವವಿದ್ಯಾಲಯ ಶಿಕ್ಷಣ		
೨೦ ವಿಶ್ವವಿದ್ಯಾಲಯಗಳು	೨೦	೬೭
ಆರ್ಟ್ಸ ಮತ್ತು ಸಾಯನ್ಸ ಕಾಲೇಜುಗಳು		
೨೧ ಕಾಲೇಜುಗಳು	೪೨೦	೧೬೦೦
೨೨ ವಿದ್ಯಾರ್ಥಿಗಳು—ಲಕ್ಷದಲ್ಲಿ	೨	೧೦
೨೩ ಪ್ರಾಧ್ಯಾಪಕರು	೧೫,೩೧೨	೫೦.೦೦೦
೨೪ ಖರ್ಚು—ಕೋಟಿ ರೂ.ಗಳಲ್ಲಿ	೪.೩೯	೫.೩೩
೨೫ ಪ್ರತಿ ವಿದ್ಯಾರ್ಥಿಗೆ ಖರ್ಚು—ರೂಪಾಯಿಗಳಲ್ಲಿ	೨೨೩.೯	೩೨೬.೫
ಶಿಕ್ಷಕರ ಕಾಲೇಜು ಮತ್ತು ತಾಂತ್ರಿಕ ಕಾಲೇಜುಗಳು		
೨೬ ಕಾಲೇಜುಗಳು	೧೪೦	೧೩೫೦
೨೭ ವಿದ್ಯಾರ್ಥಿಗಳು	೩೪,೦೦೦	೪.೨೦.೦೦೦
೨೮ ಖರ್ಚು—ಕೋಟಿ ರೂ.ಗಳಲ್ಲಿ	೧.೮೬	೩೫

೬. ರಾಷ್ಟ್ರೀಯ ಶಿಕ್ಷಣದ ನಿರ್ಧಾರ

"Any National State should have not merely an Educational System, but a National System of Education in keeping with National character, with necessary adjustments to changing contemporary needs. In this sense India has got a national system of Education"

—**Dr. Mansinha**

ರವೀಂದ್ರನಾಥ ಟಾಗೋರ ಮತ್ತು ಮಹಾತ್ಮಾ ಗಾಂಧೀಜಿಯವರು ತಮ್ಮವೇ ಆದ ಶೈಕ್ಷಣಿಕ ಪ್ರಯೋಗಗಳಿಂದ ಭಾರತೀಯ ಶಿಕ್ಷಣ ಪದ್ಧತಿಯಲ್ಲಿಯ ದೋಷಗಳನ್ನು ನಿವಾರಿಸಲು ಪ್ರಯತ್ನಿಸಿದರು. ಆದರೆ ಅವರ ಪ್ರಯೋಗಗಳು ಭಾರತೀಯರಲ್ಲಿ ಆಗಬೇಕಾದಷ್ಟು ಜಾಗೃತಿಯನ್ನು ಉಂಟು ಮಾಡಲಿಲ್ಲ. ಮತ್ತು ಅವುಗಳ ಉದ್ದೇಶಗಳೂ ಸೀಮಿತವಾದ್ದರಿಂದ ಸಮಸ್ತ ಭಾರತಕ್ಕೆ ಬೇಕಾದ ಏಕರೂಪ ರಾಷ್ಟ್ರೀಯ ಶಿಕ್ಷಣವನ್ನು ಅವು ನಿರ್ಮಿಸಲಾರದೆ ಹೋದವು.

ರಾಷ್ಟ್ರೀಯ ಶಿಕ್ಷಣವು ತಲೆತಲಾಂತರದಿಂದ ಪ್ರಚಲಿತವಿದ್ದ ಜೀವನಮೌಲ್ಯಗಳನ್ನು ರಕ್ಷಿಸುವಂಥದಿರಬೇಕು. ಜೀವನಮೌಲ್ಯ

ಗಳೇ ಆ ರಾಷ್ಟ್ರವನ್ನು ಮಹಾ ರಾಷ್ಟ್ರವನ್ನಾಗಿ ಪರಿವರ್ತಿಸಿ, ಆ ನಾಡಿನಲ್ಲಿ ಕರ್ಮವೀರರನ್ನು ನಿರ್ಮಿಸಿ, ಅವರಿಂದ ಮಹತ್ಕಾರ್ಯಗಳು ಜರುಗುವಂತೆ ಪ್ರೇರಣೆಯನ್ನೀಯುತ್ತವೆ. ಹಾಗೆಯೇ ಆ ರಾಷ್ಟ್ರೀಯ ಶಿಕ್ಷಣವು ಕಾಲಾಂತರದಲ್ಲಿ ನುಸುಳಿಕೊಂಡು ಬಂದ ಅ-ರಾಷ್ಟ್ರೀಯ ದೋಷಗಳನ್ನು ಹೊಡೆದೋಡಿಸುವ ಪತ್ತುಗಡೆಯನ್ನು ಮಾಡುತ್ತಿರುತ್ತದೆ.

ಭಾರತದ ಮಟ್ಟಿಗೆ ಹೇಳುವದಾದರೆ- ಭಾರತೀಯ ಶಿಕ್ಷಣವು ಧಾರ್ಮಿಕ ತತ್ವಗಳಲ್ಲಿ ನಂಬಿಗೆ ಹುಟ್ಟಿಸಿ, ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಅಭಿಮಾನ ಜಾಗೃತಗೊಳಿಸಬೇಕು. ಅನ್ಯ ಧರ್ಮಗಳನ್ನು ಸಹಾನುಭೂತಿಯಿಂದ ಕಾಣುವ ಹಾಗು ಸಾಮಾಜಿಕ-ಭೇದವನ್ನು ತಾಳ್ಮೆಯಿಂದ ನೋಡುವ ದೃಷ್ಟಿಯನ್ನು ಒದಗಿಸಬೇಕು; ವಿದ್ಯೆಗಾಗಿ ಮತ್ತು ವಿದ್ಯಾಪ್ರದಾನ ಮಾಡುವ ಗುರುಗಳಿಗಾಗಿ ಗೌರವ ಭಾವನೆಯನ್ನು ಬೇರೂರಿಸಬೇಕು; ಗುರು ಹಿರಿಯರಲ್ಲಿ ಗೌರವಾದರಗಳನ್ನು ಹುಟ್ಟಿಸಬೇಕು; ಮತ್ತು ಭಾರತೀಯರ ಜೀವನದ ಉಸಿರಾದ-ಸಾದಾ ಜೀವನ ಉಚ್ಚ ವಿಚಾರ-ಕುರಿತು ದೃಢ ನಂಬಿಗೆಯನ್ನು ಸ್ಥಿರಗೊಳಿಸಬೇಕು.

ಹಾಗೆಯೇ ಇತ್ತೀಚೆಗೆ ಭಾರತೀಯರಲ್ಲಿ ಮನೆ ಮಾಡಿಕೊಂಡ ದೈಹಿಕ ಶ್ರಮದ ಬಗ್ಗೆ ಇರುವ ತಿರಸ್ಕಾರ ಭಾವನೆಯನ್ನೂ ಜೀವನದಲ್ಲಿಯ ಸೌಂದರ್ಯಾಸ್ವಾದನೆಗೆ ಅಡ್ಡಬರುತ್ತಿರುವ ಆಲಸ್ಯವನ್ನೂ, ವ್ಯಕ್ತಿಗತ, ಕೌಟುಂಬಿಕ ಹಾಗು ಸಾಮಾಜಿಕ ಜೀವನದಲ್ಲಿ ಹುಟ್ಟಿಕೊಂಡ ಅಸಹ್ಯ ನಡೆನುಡಿಗಳನ್ನೂ, ನೆರೆಹೊರೆ

ಯುವರಿಗಾಗಿ, ತನ್ನ ಸಮಾಜಕ್ಕಾಗಿ ಹಾಗು ದೇಶಕ್ಕಾಗಿ ಹುಟ್ಟಿಕೊಂಡ ಅನಾಸಕ್ತ ಭಾವನೆಯನ್ನೂ, ಪ್ರಾಂತೀಯ ಸಂಕುಚಿತ ವೃತ್ತಿಯನ್ನೂ, ರಾಷ್ಟ್ರೀಯ ಹಿತವನ್ನೂ ಲೆಕ್ಕಿಸದೆ ಸ್ವಕೀಯ ಹಿತವನ್ನು ಸಾಧಿಸುವ ಪ್ರವೃತ್ತಿಯನ್ನೂ, ಸ್ವಾರ್ಥಸಾಧನೆಗಾಗಿ ರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸುವದನ್ನೂ— ರಾಷ್ಟ್ರೀಯ ಶಿಕ್ಷಣವು ತಡೆಹಿಡಿಯಬೇಕು.

ಭಾರತೀಯ ಶಾಲೆ–ಕಾಲೇಜುಗಳು ನಾವು ಮೊದಲು ಭಾರತೀಯರೆಂಬ ಉತ್ಕಟ ಭಾವನೆಯ ತರುಣ ತರುಣಿಯರನ್ನು ನಿರ್ಮಿಸುವ ಶಿಕ್ಷಣ ಕೊಡಬೇಕು. ನ್ಯಾಯನೀತಿಗಳನ್ನು ಎತ್ತಿ ಹಿಡಿದು, ಮಾಡುವ ಕಾರ್ಯ ಯಾವುದೇ ಇದ್ದರೂ, ಅದು ತಾಯಿನಾಡಿಗಾಗಿ ಒದಗಿದ ಸೇವಾವಕಾಶವೆಂದು ಬಗೆಯುವ ತರುಣರನ್ನು ಒದಗಿಸಬೇಕು. ಕೊಠಾರಿ ಆಯೋಗವು ರಚಿಸಿದ ವರದಿಯು ಭಾರತಕ್ಕೆ ಇಂಥ ರಾಷ್ಟ್ರೀಯ ಶಿಕ್ಷಣವನ್ನು ಒದಗಿಸುವ ವಿವರಗಳನ್ನು ಹೊಂದಿದೆ.

ಕೊಠಾರಿ ಆಯೋಗವು ಒದಗಿಸಬೇಕೆಂದಿರುವ ರಾಷ್ಟ್ರೀಯ ಶಿಕ್ಷಣವು ಮುಖ್ಯವಾಗಿ ಮೂರು ಗುರಿಗಳನ್ನು ಇಟ್ಟುಕೊಂಡಿದೆ:

(೧) ಭಾರತೀಯ ಶಿಕ್ಷಣವನ್ನು ಪ್ರತ್ಯಕ್ಷ ಜೀವನ, ಜೀವನದ ಬೇಡಿಕೆ, ರಾಷ್ಟ್ರೀಯ ಜೀವನದ ಆಕಾಂಕ್ಷೆಗಳಿಗೆ ಹೊಂದಾಣಿಕೆಯಾಗುವಂತೆ ಮಾಡುವದು.

(೨) ಶೈಕ್ಷಣಿಕ ಮಟ್ಟವನ್ನು ಸಾಕಷ್ಟು ಎತ್ತರಿಸಿ, ಅದು ಸದಾ ಮೇಲೇರುವಂತೆ ಮತ್ತು ಅಂತರರಾಷ್ಟ್ರೀಯ ಮಟ್ಟವನ್ನು ಮುಟ್ಟುವಂತೆ ಪ್ರಯತ್ನಿಸುವದು.

(೩) ಶೈಕ್ಷಣಿಕ ಅವಕಾಶಗಳು ಸರ್ವರಿಗೂ ಲಭ್ಯವಾಗುವಂತೆ ಮಾಡಿ, ಮಾನವ ಶಕ್ತಿಯ ಬೇಡಿಕೆಗನುಗುಣವಾಗಿ ಶೈಕ್ಷಣಿಕ ಸೌಲಭ್ಯಗಳನ್ನು ವಿಸ್ತರಿಸುವದು.

ಈ ಗುರಿಗಳನ್ನು ಮುಟ್ಟಬೇಕಾದರೆ ಭಾರತೀಯ ಶಿಕ್ಷಣವು–

(೧) ಉತ್ಪಾದನಾ ಸಾಮರ್ಥ್ಯ ಹೊಂದಿರಬೇಕು.

(೨) ಸಾಮಾಜಿಕ ಮತ್ತು ರಾಷ್ಟ್ರೀಯ ಐಕ್ಯ ಸ್ಥಾಪಿಸಬೇಕು. ಪ್ರಜಾಪ್ರಭುತ್ವವು ಒಂದು ರಾಜಕೀಯ ಪದ್ಧತಿಯೆಂದು ಒಪ್ಪಿಕೊಂಡು ಅದನ್ನು ಜೀವನದ ನೀತಿಯೆಂದು ಅನುಸರಿಸಲು ನೆರವಾಗಬೇಕು.

(೩) ಆಧುನೀಕರಣವನ್ನು ತ್ವರಿತಗೊಳಿಸಬೇಕು.

(೪) ಸಾಮಾಜಿಕ, ನೈತಿಕ ಹಾಗು ಅಧ್ಯಾತ್ಮಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಸಚ್ಚಾರಿತ್ರ್ಯವನ್ನು ನಿರ್ಮಿಸಬೇಕು.

ಶಿಕ್ಷಣ ಮತ್ತು ಉತ್ಪಾದನೆಗಳಲ್ಲಿ ಹೊಂದಾಣಿಕೆ ಉಂಟು ಮಾಡಿಕೊಳ್ಳಲು ಕೆಳಗಿನ ಮಾತುಗಳನ್ನು ಅವಶ್ಯವಾಗಿ ಗಮನಿಸಬೇಕು.

(೧) ವಿಜ್ಞಾನವು ಶಿಕ್ಷಣ–ಸಂಸ್ಕೃತಿಗಳ ಅವಿಭಾಜ್ಯ ಅಂಗವಾಗಬೇಕು.

(೨) ಕಾರ್ಯಾನುಭವವು ಸಾಮಾನ್ಯ ಶಿಕ್ಷಣದ ತಿರುಳಾಗಬೇಕು.

(೩) ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ ಶಿಕ್ಷಣವನ್ನು ವೃತ್ತೀಕರಣಗೊಳಿಸಿ, ವ್ಯಾಪಾರ, ಉದ್ಯೋಗ, ಒಕ್ಕಲುತನಗಳ ಬೇಡಿಕೆಯನ್ನು ಪೂರೈಸಬೇಕು.

(೪) ವೈಜ್ಞಾನಿಕ ಹಾಗು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆ, ಅಭಿವೃದ್ಧಿಗಳನ್ನು–ವಿಶೇಷವಾಗಿ ಕೃಷಿಶಾಸ್ತ್ರದಲ್ಲಿ ಸಾಧಿಸಬೇಕು.

ಯಾವುದೇ ಶಿಕ್ಷಣವು, ಅದು ಒಳ್ಳೆಯದು ಮತ್ತು ಉದ್ದೇಶ ಪೂರ್ವಕವಾದದ್ದು ಇರಬೇಕಾದರೆ ಕೆಳಗಿನ ನಾಲ್ಕು ಮುಖ್ಯಾಂಶ ಗಳನ್ನು ಹೊಂದಿರಬೇಕೆಂದು ಆಯೋಗವು ನಂಬಿದೆ.

(೧) ಶೈಕ್ಷಣಿಕ ಕ್ರಮದಲ್ಲಿ ಸಾಹಿತ್ಯ, ಭಾಷಾಭ್ಯಾಸ ಸಾಮಾಜಿಕ ಹಾಗು ಮಾನವೀಯ ಶಾಸ್ತ್ರಗಳ ಅಧ್ಯಯನ.

(೨) ಗಣಿತಶಾಸ್ತ್ರ ಮತ್ತು ನೈಸರ್ಗಿಕ ಶಾಸ್ತ್ರಗಳ ಅಭ್ಯಾಸ.

(೩) ಕಾರ್ಯಾನುಭವ.

(೪) ಸಾಮಾಜಿಕ ಸೇವೆ.

ಭಾರತವು ಈಗಾಗಲೇ ಒಪ್ಪಿಕೊಂಡ ಪ್ರಜಾಪ್ರಭುತ್ವ–ಹಾಗು ಸಮಾಜವಾದೀ ಸಮಾಜ ರಚನೆಯನ್ನು ಸಾಧಿಸಲು ಕೊಠಾರಿ ಆಯೋಗವು ಕೆಳಗಿನ ಸಂಗತಿಗಳ ಮೇಲೆ ವಿಶೇಷ ಬಲವೀಯುತ್ತದೆ.

(೧) ಪ್ರತಿಯೊಬ್ಬ ವಿದ್ಯಾರ್ಥಿಗೆ ಕನಿಷ್ಠ ಏಳು ವರುಷಗಳ ಸಾಮಾನ್ಯ ಶಿಕ್ಷಣವನ್ನು ಪುಕ್ಕಟೆಯಾಗಿ, ಒತ್ತಾಯದಿಂದ ಒದಗಿಸಬೇಕು. ಮತ್ತು ಮಾಧ್ಯಮಿಕ ಶಿಕ್ಷಣವನ್ನು ಸಾಧ್ಯವಿದ್ದಷ್ಟು ವಿಸ್ತೃತಗೊಳಿಸಬೇಕು.

(೨) ಸಮರ್ಥ ವಿದ್ಯಾರ್ಥಿಗಳಿಗೆ ದೇಶದ ಬೇಡಿಕೆಯನ್ನು ಗಮನಿಸಿ, ನಿರ್ದಿಷ್ಟ ಮಟ್ಟವನ್ನು ಕಾಯ್ದುಕೊಳ್ಳುತ್ತ, ಉಚ್ಚ ಮಾಧ್ಯಮಿಕ ಹಾಗು ವಿಶ್ವವಿದ್ಯಾಲಯ ಶಿಕ್ಷಣವನ್ನು ಕೊಡಬೇಕು. ಆರ್ಥಿಕವಾಗಿ ಅಸಮರ್ಥರಿರುವ, ಬುದ್ಧಿವಂತ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯವನ್ನು ಒದಗಿಸಬೇಕು.

(೩) ಔದ್ಯೋಗಿಕ, ತಾಂತ್ರಿಕ, ಹಾಗು ವೃತ್ತಿವಿಷಯಕ ಶಿಕ್ಷಣವನ್ನು ಸುಧಾರಿಸಿ ಉದ್ಯೋಗ ಹಾಗು ಕೃಷಿಸಂವರ್ಧನೆಗೆ ಬೇಕಾದ ಕುಶಲ ಕೆಲಸಗಾರರನ್ನು ಒದಗಿಸಬೇಕು.

(೪) ವಿದ್ಯಾರ್ಥಿಗಳ ಬುದ್ಧಿಮತ್ತೆಯನ್ನು ಗುರುತಿಸಿ ಅವರು ಅದನ್ನು ಬೆಳೆಯಿಸಿಕೊಳ್ಳುವಂತೆ ನೆರವಾಗಬೇಕು: ನಿರಕ್ಷರತೆಯನ್ನು ನಿವಾರಿಸಬೇಕು; ಪ್ರೌಢ ಶಿಕ್ಷಣವು ಹೆಚ್ಚೆಚ್ಚು ಬೆಳೆಯಲು ನೆರವಾಗಬೇಕು: ಶೈಕ್ಷಣಿಕ ಸಮಾನಾವಕಾಶಗಳು ಸಕಲರಿಗೂ ಮುಟ್ಟುವಂತೆ ಪ್ರಯತ್ನಿಸಬೇಕು.

(೫) ಪ್ರಾಥಮಿಕ ಶಿಕ್ಷಣ: ಗಾಂಧೀಜಿಯವರು ಪ್ರತಿಪಾದಿಸಿದ ಮೂಲಶಿಕ್ಷಣವನ್ನೇ ಕಾರ್ಯಾನುಭವವೆಂಬ ಹೊಸ ಹೆಸರಿನಿಂದ ಇಲ್ಲಿಯೂ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.

ಭಾರತಕ್ಕೆ ಒಂದೇ ಮಾದರಿಯ ಪ್ರಾಥಮಿಕ ಶಿಕ್ಷಣವನ್ನು ಯೋಜಿಸಲಾಗಿದೆ. ಅದು ಏಳು ವರುಷದ್ದಾಗಿದ್ದು. ೫ನೇ ವರ್ಗ ದಿಂದ ಇಂಗ್ಲೀಷ ಶಿಕ್ಷಣ ಕೊಡಬೇಕೆಂದು ಸೂಚಿಸಲಾಗಿದೆ. ಅಭ್ಯಾಸ ಕ್ರಮದಲ್ಲಿ, ಮಾತೃಭಾಷೆ, ಸಮಾಜಶಾಸ್ತ್ರ, ಗಣಿತ, ವಿಜ್ಞಾನ, ಸಮಾಜಸೇವೆ, ಕಾರ್ಯಾನುಭವ ಮುಂತಾದ ವಿಷಯ ಗಳು ಸಮಾವೇಶವಾಗುತ್ತವೆ. ಮಾತೃಭಾಷೆಯನ್ನು ಶುದ್ಧವಾಗಿ ಓದಲು, ಬರೆಯಲು ಮತ್ತು ಮಾತಾಡಲು ವಿಶೇಷ ದಕ್ಷತೆಯನ್ನು ವಹಿಸಬೇಕೆಂದು ಹೇಳಲಾಗಿದೆ. ಶಿಕ್ಷಕರ ವೇತನ, ಸೇವಾನಿಯಮ, ತರಬೇತಿ, ವಸತಿ–ಸೌಕರ್ಯ ಮುಂತಾದ ಮಹತ್ವದ ಸಂಗತಿ ಗಳನ್ನು ಗಮನಿಸಲಾಗಿದೆ.

(ಬ) ಮಾಧ್ಯಮಿಕ ಶಿಕ್ಷಣ: ಮಾಧ್ಯಮಿಕ ಶಿಕ್ಷಣವು ಮೂರು ವರುಷದ್ದಾಗಿದೆ. ೮ನೇ ವರ್ಗದಿಂದ ಹಿಂದೀ ಭಾಷೆ ಕಲಿಸುವ ಏರ್ಪಾಡಾಗಬೇಕು. ಎಲ್ಲ ಶಿಕ್ಷಣವೂ ಮಾತೃಭಾಷೆಯ ಮುಖಾಂತರ ನಡೆಯಬೇಕು. ಅಭ್ಯಾಸ ಕ್ರಮದಲ್ಲಿ ಮಾತೃ ಭಾಷೆಗೆ ವಿಶೇಷ ಪ್ರಾಶಸ್ತ್ಯ ನೀಡಬೇಕು. ಮಾತೃಭಾಷೆ ಸಮಾಜಶಾಸ್ತ್ರ, ಗಣಿತ, ವಿಜ್ಞಾನ, ಕಾರ್ಯಾನುಭವ, ಸಮಾಜ ಸೇವೆ ಮುಂತಾದ ವಿಷಯಗಳು ಕಲಿಸಲ್ಪಡಬೇಕೆಂದು ಸೂಚಿಸ ಲಾಗಿದೆ.

(ಕ) ಉಚ್ಚ ಮಾಧ್ಯಮಿಕ ಶಿಕ್ಷಣ: ಉಚ್ಚ ಮಾಧ್ಯಮಿಕ ಶಿಕ್ಷಣವು ಎರಡು ವರುಷದ್ದಾಗಿದೆ. ಅಂದರೆ ೧೧ನೇ ಮತ್ತು ೧೨ನೇ ವರ್ಗಗಳು ಮಾಧ್ಯಮಿಕ ಶಾಲೆಗಳಿಗೆ ಜೋಡಿಸಲ್ಪಡಲಿವೆ.

ಇದಾದ ನಂತರ ಪದವಿ ಶಿಕ್ಷಣವು ಮೂರು ವರುಷದ್ದಾಗಿದೆ. ಯೋಗ್ಯ ಮತ್ತು ಸಮರ್ಥ ವಿದ್ಯಾರ್ಥಿಗಳೇ ಉಚ್ಚಮಾಧ್ಯಮಿಕ ಶಾಲೆಗೆ ಸೇರಬೇಕೆಂಬ ಸಲಹೆ ಮಾಡಲಾಗಿದೆ. ಇಲ್ಲಿಯೂ ಮಾತೃಭಾಷೆಗೆ ಪ್ರಾಧಾನ್ಯವೀಯಲಾಗಿದೆ. ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಕಾರ್ಯಾನುಭವ, ಸಮಾಜ ಸೇವೆಗಳು ಮಹತ್ವದ ಸ್ಥಾನ ಪಡೆದಿವೆ. ಉಚ್ಚಮಾಧ್ಯಮಿಕ ಶಾಲೆಗಳಲ್ಲಿ ಕಲಿಸುವ ಶಿಕ್ಷಕರಿಗೆ ಪದವೀಪೂರ್ವ ವರ್ಗಗಳಲ್ಲಿ ಕಲಿಸುವ ಕಾಲೇಜ ವೇತನ ಶ್ರೇಣಿಯನ್ನು ಸೂಚಿಸಲಾಗಿದೆ. ಈಗ ಆಯೋಗವು ಸೂಚಿಸಿದ ಕಾಲೇಜ ಶಿಕ್ಷಕರ ವೇತನ ಶ್ರೇಣಿಯು ರೂ. ೩೦೦ ರಿಂದ ೬೦೦ ವರೆಗೆ ಇದೆ. ಇದರಿಂದ ಉಚ್ಚಶಿಕ್ಷಣ ಪಡೆದ ಯೋಗ್ಯ ಶಿಕ್ಷಕರನ್ನು ಸಹಜವಾಗಿ ಪಡೆಯಬಹುದು.

(ಡ) ಉಚ್ಚಶಿಕ್ಷಣ: ಉಚ್ಚಶಿಕ್ಷಣವು ಸಾಧ್ಯವಿದ್ದಷ್ಟು ಜಾಣ ವಿದ್ಯಾರ್ಥಿಗಳಿಗೆ ಮೀಸಲಿರಬೇಕೆಂದು ಹೇಳಲಾಗಿದೆ. ವಿಶ್ವವಿದ್ಯಾಲಯದ ಶಿಕ್ಷಣದ ಗುರಿಯು ಕೆಳಗಿನಂತಿರಬೇಕು.

೧) ಹೊಸ ಹೊಸ ಜ್ಞಾನ ಸಂಪಾದನೆ, ಸತ್ಯಾನ್ವೇಷಣೆ, ಆಧುನಿಕ ಸಮಾಜದ ಬೇಡಿಕೆ ಹಾಗು ಸಂಶೋಧನೆಗಳ ಬೆಳಕಿನಲ್ಲಿ ಪ್ರಾಚೀನ ವಿದ್ಯೆಯನ್ನು ಅರ್ಥೈಸುವದು.

೨) ಜೀವನದ ಸರ್ವ ಕ್ಷೇತ್ರಗಳಿಗೆ ಯೋಗ್ಯ ಮುಂದಾಳುಗಳನ್ನು ಪೂರೈಸುವದು; ಅವರ ದೈಹಿಕ ಮಾನಸಿಕ ಶಕ್ತಿಗಳನ್ನು ಬೆಳೆಯಿಸಿ, ಅವರಲ್ಲಿ ಯೋಗ್ಯ ಅಭಿರುಚಿ ಆಸಕ್ತಿಗಳನ್ನು ಹುಟ್ಟಿಸುವದು ಹಾಗು ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಕಾಪಾಡಿಕೊಳ್ಳುವದು.

೩) ಸಮಾಜಕ್ಕೆ ಬೇಕಾದ ಸಮರ್ಥ ಸುಶಿಕ್ಷಿತರನ್ನು ಕೃಷಿ ಕಲೆ, ಔಷಧ, ವಿಜ್ಞಾನ ಹಾಗು ತಾಂತ್ರಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಲು ಒದಗಿಸುವದು.

೪) ಯೋಗ್ಯ ಶಿಕ್ಷಣದ ಮುಖಾಂತರ ಸಮಾನತೆ ಹಾಗು ಸಾಮಾಜಿಕ ನ್ಯಾಯ ದೊರಕುವಂತೆ ಮಾಡಿ ಸಾಮಾಜಿಕ ಹಾಗು ಸಾಂಸ್ಕೃತಿಕ ಭಿನ್ನತೆಯ ನಿವಾರಣೆಯನ್ನು ಸಾಧಿಸುವದು.

೫) ವಿದ್ಯಾರ್ಥಿಗಳಲ್ಲಿ ಹಾಗು ಶಿಕ್ಷಕರಲ್ಲಿ ಒಳ್ಳೇ ಜೀವನಕ್ಕೆ ಬೇಕಾದ ಆಸಕ್ತಿ ಅಭಿರುಚಿಗಳನ್ನು ಹುಟ್ಟಿಸಿ ಅವರಿಂದ ಮುಂದೆ ಸಮಾಜದಲ್ಲಿ ಆ ಒಳ್ಳೇ ಗುಣಗಳು ಬೇರೂರುವಂತೆ ಪ್ರಯತ್ನಿಸುವದು.

ಭಾರತೀಯ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಉಂಟುಮಾಡಬೇಕು. ವಿಶ್ವವಿದ್ಯಾಲಯದಿಂದ ಹೊರಬೀಳುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಭಾರತೀಯ ಸಂಸ್ಕೃತಿ, ಕಲೆ. ತತ್ವಜ್ಞಾನಗಳನ್ನು ತಿಳಿದುಕೊಂಡಿರಬೇಕು. ಈ ವಿಷಯಕವಾದ ಅಭ್ಯಾಸವನ್ನು ಪ್ರಥಮ ಪದವಿಪೂರ್ವ ಹಂತದಲ್ಲಿ, ಸಾಮಾನ್ಯ ಶಿಕ್ಷಣ ಕ್ರಮದೊಂದಿಗೆ ಕೊಡಬೇಕು.

ಇಂದು ಭಾರತೀಯ ತರುಣರು ಉಚ್ಚಶಿಕ್ಷಣಕ್ಕಾಗಿ ಇಂಗ್ಲಂಡ. ಅಮೇರಿಕಾ. ರಶಿಯಾ. ಜರ್ಮನಿ. ಜಪಾನಗಳತ್ತ ನೋಡುತ್ತಿದ್ದಾರೆ. ಬಹುಶಃ ಅದೊಂದು ಚಟವಾಗಿ ಬೆಳೆದು

ಬಂದಿದೆ. ಇದನ್ನು ತಡೆಹಾಕುವ ದೃಷ್ಟಿಯಿಂದ ಮತ್ತು ಭಾರತದಲ್ಲಿಯೇ ಯೋಗ್ಯ ಶಿಕ್ಷಣದ ಅವಕಾಶ ದೊರೆಯಲೆಂಬ ದೃಷ್ಟಿಯಿಂದ ಕೊಠಾರಿ ಆಯೋಗವು ಹಲವು ವಿಶ್ವವಿದ್ಯಾಲಯಗಳನ್ನು ಹಿರಿಯ ವಿಶ್ವವಿದ್ಯಾಲಯಗಳೆಂದು ಬೆಳೆಯಿಸಲು ಸಲಹೆ ಮಾಡಿದೆ. ಅವು ಆಧುನಿಕ ಭಾರತದಲ್ಲಿ ಜ್ಞಾನ ವಿಜ್ಞಾನಗಳಲ್ಲಿ ಅತಿ ಉಚ್ಚ ಮಟ್ಟದ ಶಿಕ್ಷಣ ಕೊಡುವಂತಾಗಬೇಕು. ಭಾರತೀಯ ವಿದ್ಯಾರ್ಥಿಗಳು ಅಸಂಖ್ಯ ಸಂಖ್ಯೆಯಲ್ಲಿ ಪರದೇಶಗಳಿಗೆ ಹೋಗಿ ಹಣ ವೆಚ್ಚ ಮಾಡುವದೂ ತಪ್ಪುವದು. ಭಾರತದ ಶೈಕ್ಷಣಿಕ ಮಟ್ಟದ ಬಗ್ಗೆ ಅಭಿಮಾನವೂ ಹುಟ್ಟುವದು.

ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯ ಹಂತದವರೆಗೆ ಪ್ರಾದೇಶಿಕ (ಬಹುಸಂಖ್ಯಾತರ ಮಾತೃಭಾಷೆ) ಭಾಷೆಯನ್ನೇ ಶಿಕ್ಷಣದ ಮಾಧ್ಯಮವನ್ನಾಗಿ ಮಾಡಿ ಇದುವರೆಗೂ ಸಮಸ್ಯಾತ್ಮಕವಾಗಿದ್ದ ವಿಶ್ವವಿದ್ಯಾಲಯದ ಮಾಧ್ಯಮವನ್ನು ಬಗೆಹರಿಸಲಾಗಿದೆ. ಹಿಂದಿ ರಾಷ್ಟ್ರಭಾಷೆಯಾಗುವಂತೆ ಕ್ರಮ ಕೈಕೊಳ್ಳುವ ಉಪಕ್ರಮದೊಂದಿಗೆ ಇಂಗ್ಲೀಷ ಭಾಷೆಯನ್ನು ವಾಚನಾಲಯ ಭಾಷೆಯೆಂದು ಅಭ್ಯಸಿಸುವ ಹೊಸ ಸೂಚನೆಯನ್ನು ಮಾಡಲಾಗಿದೆ. ಇಂಗ್ಲೀಷ ಭಾಷಾಜ್ಞಾನವು ಅತ್ಯವಶ್ಯವೆಂದು ಪ್ರತಿಪಾದಿಸುವವರೂ ಇದರಿಂದ ತೃಪ್ತರಾಗದೆ ಇರರು.

ಪ್ರಜಾಪ್ರಭುತ್ವದ ಯಶಸ್ಸಿಗೆ ಸಾಕ್ಷರತೆ ಅತ್ಯವಶ್ಯವೆಂದು ಈಗಾಗಲೇ ಒಪ್ಪಿಕೊಳ್ಳಲಾಗಿದೆ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ನೂರಕ್ಕೆ ನೂರರಷ್ಟು ಜನ ಸಾಕ್ಷರರಿದ್ದರೂ, ಎರಡು

ಮಹಾ ಯುದ್ಧಗಳನ್ನು ಅವರಿಂದ ತಡೆಯುವದಾಗಲಿಲ್ಲ. ಸಾಕ್ಷರತೆಯೊಂದಿಗೆ ರಾಷ್ಟ್ರೀಯ ಹಾಗು ಜಾಗತಿಕ ನಾಗರಿಕ ಪ್ರಜ್ಞೆ ವಿಕಸಿತವಾಗಬೇಕು. ಸಾಕ್ಷರತೆಯೊಂದು ಸಾಧನ. ಅದನ್ನು ವಿಚಾರ ಪ್ರಬೋಧನೆಗೆ ಅಳವಡಿಸಿಕೊಳ್ಳಬೇಕು. ಭಾರತವು ಹಳ್ಳಿಗಳ ನಾಡು. ಬಹುಸಂಖ್ಯಾಕರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಅವರಲ್ಲಿ ಸರಿಯಾದ ರಾಜಕೀಯ ಪ್ರಜ್ಞೆ ಬೆಳೆದರೆ. ಭಾರತದ ಪ್ರಜಾಪ್ರಭುತ್ವ ಯಶಸ್ವಿಯಾಗಬಲ್ಲದು. ಇದಕ್ಕಾಗಿ ಕೊಠಾರಿ ಆಯೋಗವು, ಭಾರತದ ಮೂಲೆಮೂಲೆಗಳಲ್ಲಿ ವಾಚನಾಲಯಗಳನ್ನು ಸ್ಥಾಪಿಸಿ ಜನರ ವಿಚಾರ ಶಕ್ತಿಯನ್ನು ಕುದುರಿಸಬೇಕೆನ್ನುತ್ತದೆ. ಹಾಗೆಯೇ ಸಮಾಜ ಶಿಕ್ಷಣವನ್ನು ವಿಸ್ತರಿಸಿ ನಾಡಿನ ಅಭಿವೃದ್ಧಿ ಯೋಜನೆಗಳಲ್ಲಿ ಸಮಸ್ತ ಭಾರತೀಯರನ್ನು ಭಾಗೀದಾರರನ್ನಾಗಿ ಮಾಡಬೇಕೆಂದು ಅಭಿಪ್ರಾಯ ಪಡುತ್ತದೆ.

ಒಟ್ಟಾರೆ ಡಾ. ಕೊಠಾರಿ ಆಯೋಗವು ಭಾರತದ ಸಮಗ್ರ ಶಿಕ್ಷಣವನ್ನು, ರಾಷ್ಟ್ರೀಯ ತಳಹದಿಯ ಮೇಲೆ ಪುನರ್ಘಟಿಸುವ ಛಲವಿಟ್ಟುಕೊಂಡಿದೆ. ಸ್ವತಂತ್ರ ಭಾರತದಲ್ಲಿ ಪ್ರಪ್ರಥಮವಾಗಿ ರಾಷ್ಟ್ರೀಯ ಭದ್ರತೆ, ರಾಷ್ಟ್ರೀಯ ಐಕ್ಯ, ರಾಷ್ಟ್ರೀಯ ಸಂಸ್ಕೃತಿ. ರಾಷ್ಟ್ರೀಯ ಹಿರಿಮೆಯನ್ನು ರಾಷ್ಟ್ರೀಯ ಶಿಕ್ಷಣದ ಧ್ಯೇಯ ಧೋರಣೆಗಳೆಂದು ಬಗೆದು ವಿಸ್ತೃತವಾದ ಹಾಗು ಅಭ್ಯಾಸ ಪೂರ್ಣವಾದ ವರದಿಯನ್ನು ದೇಶದ ಮುಂದಿಟ್ಟಿದೆ. ರಾಷ್ಟ್ರೀಯ ಶಿಕ್ಷಣ ರೂಪಿಸಲು ಕನಿಷ್ಠ ಇಪ್ಪತ್ತು ವರುಷಗಳಾದರೂ ಬೇಕೆಂದು ಆ ಅವಧಿಯನ್ನೂ ಸ್ಪಷ್ಟಪಡಿಸಿದೆ. ಅದನ್ನು ಸ್ವೀಕರಿಸಿ

ಧೈರ್ಯದಿಂದ ಹೆಜ್ಜೆ ಇಡುವದು ಭಾರತ ಸರಕಾರಕ್ಕೆ ಸೇರಿದ ವಿಷಯುವಾಗಿದೆ.

ಪ್ರೊ. ಡಿ. ಸಿ. ಶರ್ಮಾರಂಥ ಸಂಸತ್ ಸದಸ್ಯರು ಕೊಠಾರಿ ಆಯೋಗದ ವರದಿಯು ಬಗೆಗೆ ಸದಭಿಪ್ರಾಯು ಇಟ್ಟು ಕೊಂಡಿದ್ದಾರೆ. ಅವರ ಶಬ್ದಗಳಲ್ಲಿಯೇ ಹೇಳುವದಾದರೆ:

"The problem in India today is to produce through our schools and colleges and Universities and professional and technical colleges a band of people who are Indians first and last' who place the integrity of character above everything and who look upon every vocation that they follow as an avenue to the service of their Motherland. It may be possible that the solution to these problems has been found by the Kothari Commission."

೭. ಉಪಸಂಹಾರ

ರಾಜಕೀಯು ಶಕ್ತಿಯುು ಶಿಕ್ಷಣವನ್ನು ತನ್ನ ಉದ್ದೇಶಕ್ಕಾಗಿ ಹೇಗೆ ಬಳಸಬಹುದೆಂಬುದನ್ನು, ನಾವು ಬ್ರಿಟಿಷ್ ಶಿಕ್ಷಣ ಪದ್ಧತಿಯು ಅವಲೋಕನೆಯಿಂದ ಕಂಡುಕೊಂಡಿದ್ದೇವೆ. ಹಾಗೆಯೇ ರಾಜಕೀಯು ಒತ್ತಡಕ್ಕೆ ಒಳಗಾಗಿ ಅದೇ ಪದ್ಧತಿಯುನ್ನು ಮುಂದು

ವರಿಸಿ ಅನೇಕ ಸಮಸ್ಯೆಗಳನ್ನು ಹುಟ್ಟಿಸಿಕೊಂಡು ಒಂದು ಸಮಸ
ಯನ್ನು ಬಿಡಿಸುವ ಹವ್ಯಾಸದಲ್ಲಿ ಹತ್ತು ಹೊಸ ಸಮಸ್ಯೆಗಳನು
ಹುಟ್ಟಿಸಿಕೊಳ್ಳುತ್ತಲೂ ನಡೆದಿದ್ದೇವೆ. ರಾಷ್ಟ್ರೀಯ ಜೀವನ
ಗೊತ್ತುಗುರಿಯಿಲ್ಲದೆ ಚಲಿಸುವ, ಬಿರುಗಾಳಿಗೆ ಸಿಕ್ಕ ಹಡ
ನಂತಾಗಿದೆ. ಯಾವದೇ ರಾಷ್ಟ್ರವಿರಲಿ, ಅದಕ್ಕೆ ತನ್ನ ರಾ
ಕೀಯ ಗೊತ್ತುಗುರಿಗಳಿರುವಂತೆ ರಾಷ್ಟ್ರೀಯ ಶಿಕ್ಷಣವೂ ಇ
ಬೇಕು. ರಾಷ್ಟ್ರೀಯ ಶಿಕ್ಷಣದಿಂದ ರಾಷ್ಟ್ರೀಯ ಜನಾಂಗವನ
ನಿರ್ಮಿಸಬಹುದು. ಭಾರತವು ಒಂದು ರಾಷ್ಟ್ರವಾಗಿ ಬಾ
ಬೇಕಾದರೆ ಅದು ಈಗಾಗಲೇ ಸ್ವೀಕರಿಸಿದಂತೆ ಪ್ರಜಾಪ್ರಭುತ್ವ
ಸಮಾಜವಾದೀ ಸಮಾಜ ರಚನೆ, ಜಾತ್ಯತೀತ ಕಲ್ಯಾ
ರಾಜ್ಯ, ರಾಷ್ಟ್ರೀಯ ಅಭಿವೃದ್ಧಿ ಮುಂತಾದ ರಾಜಕೀಯ
ಸಾಮಾಜಿಕ ಹಾಗು ಆರ್ಥಿಕ ಗುರಿಗಳನ್ನು ಮುಟ್ಟಬೇಕಾದ
ಭಾರತೀಯರನ್ನು ಆ ದಿಶೆಯಲ್ಲಿ ಅಣಿಗೊಳಿಸಬೇಕಾಗುತ್ತ
ಆ ಕೆಲಸ ಉದ್ದೇಶಪೂರ್ಣ ರಾಷ್ಟ್ರೀಯ ಶಿಕ್ಷಣದಿಂದಲೇ ಸಾಧ
ಬ್ರಿಟಿಷರು ನಮ್ಮನ್ನು ಗುಲಾಮರನ್ನಾಗಿ ಮಾಡಲು ಶಿಕ್ಷಣವನ
ಉಪಯೋಗಿಸಿದರೆ, ನಾವು ನಮ್ಮ ದೇಶದ ಒಡೆಯರಾಗಲ
ಅದನ್ನು ಪ್ರಯೋಗಿಸಬೇಕಾಗಿದೆ. ನಮ್ಮ ಉದ್ದೇಶ ಸ್ಪ
ವಿದ್ದರೆ ಪ್ರಯೋಗ ಯಶಸ್ವಿಯಾಗುವದರಲ್ಲಿ ಸಂದೇಹವಿ
ಕೊಠಾರಿ ಆಯೋಗವು ಒಂದು ಶೈಕ್ಷಣಿಕ ಮಹತ್ಪ್ರಯೋ
ಗೈಯಲು ಈಗ ಭಾರತೀಯರಿಗೆ ಅವಕಾಶ ಒದಗಿಸಿಕೊಟ್ಟಿ
ಅದನ್ನು ನಮ್ಮ ಸರಕಾರ ಆಹ್ವಾನವೆಂದು ಸ್ವೀಕರಿಸಿ ರಾಷ್ಟ್ರೀ
ಶೈಕ್ಷಣಿಕ ಪ್ರಯೋಗಕ್ಕಿಳಿಯುವದು ಅವಶ್ಯವಾಗಿದೆ.

ಉಪನ್ಯಾಸ ಗ್ರಂಥಮಾಲೆಯ
ಇತ್ತೀಚಿನ ಪ್ರಕಟನೆಗಳು

೧. ಉಪ್ಪು, ಕ್ಷಾರ, ಭೂಮಿ ಮತ್ತು ಅವುಗಳ ಸುಧಾರಣೆ —ವಿಜಯಕುಮಾರ ಗಿಡ್ನವರ

೨. ಪ್ಲಾಸ್ಟಿಕ್ ಸರ್ಜರಿ (ಸುರೂಪಕ ಶಸ್ತ್ರಶಾಸ್ತ್ರ) —ವಾಯ್. ಎನ್. ಇರಕಲ್ಲ

೩. ಕಲಬುರ್ಗಿ ಜಿಲ್ಲೆಯ ಶಿಲಾಶಾಸನಗಳು —ವಿ. ಶಿವಾನಂದ

೪. ತುಂಗಭದ್ರಾ ನೀರಾವರಿ ಬೆಳೆಗಳು —ವಿಜಯಕುಮಾರ ಗಿಡ್ನವರ

೫. ದ್ರಾವಿಡ ಜನಾಂಗ —ಸಂಗಮೇಶ ಸವದತ್ತಿಮಠ

೬. ವರಲಕ್ಷ್ಮಿ ಬೈಬ್ರಿಡ್ ಹತ್ತಿ —ವಿಜಯಕುಮಾರ ಗಿಡ್ನವರ

೭. ಜೋಳದ ಕೀಟಕ ಪಿಡುಗುಗಳು —ಕೆ. ಎ. ಕುಲಕರ್ಣಿ

೮. ಬಾಲಲೀಲಾ ಮಹಾಂತ ಶಿವಯೋಗಿ—ಎಸ್ ಎಸ್.ಭೂಸರಡ್ಡಿ

೯. ಮೈಲಾರ ಬಸವಲಿಂಗ ಶರಣರು —ದೇವೇಂದ್ರಕುಮಾರ ಹಕಾರಿ

೧೦. ತರ್ದವಾಡಿ ನಾಡು —ಆರ್. ಎನ್. ಗುರವ

ಪ್ರಸಂಗವಿಸ್ತರಣ—ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ—೫೮೦ ೦೦೩